ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜನವರಿ 2011
ಬೆಲೆ ರೂ. 1.



# ಚಿನ್ನದ ಹುಡುಗಿ ಅಶ್ವಿನಿ ದೆಹಲಿ ಕರ್ನಾಟಕ ಸಂಘಕ್ಕೆ









ಏಶ್ಯನ್ ಗೇಮ್ಸ್ ಹಾಗೂ ಕೋಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಸತತ ಚಿನ್ನದ ಪದಕ ಗೆದ್ದು ದೇಶಕ್ಕೆ ಕೀರ್ತಿ ತಂದ ಓಟಗಾರ್ತಿ ಅಶ್ವಿನಿ ಚಿದಾನಂದ ಶೆಟ್ಟಿ ಅಕ್ಕುಂಜಿ ಅವರು ದೆಹಲಿ ಕರ್ನಾಟಕ ಸಂಘಕ್ಕೆ ಆಗಮಿಸಿದಾಗ, ದೆಹಲಿ ಕನ್ನಡಿಗರು ಆಕೆಯನ್ನು ಸಮೀಪದಿಂದ ನೋಡಿ ಪುಳಕಿತರಾದರು.

ದಿನಾಂಕ 05.12.2010ರ ಭಾನುವಾರ ದೆಹಲಿಯ ಬಂಟ್ಸ್ ಕಲ್ಚರಲ್ ಅಸೋಸಿಯೇಶನ್ ಮತ್ತು ದೆಹಲಿ ಕರ್ನಾಟಕ ಸಂಘ ಜಂಟಿಯಾಗಿ ಕನ್ನಡದ ಚಿನ್ನದ ಹುಡುಗಿ ಅಶ್ವಿನಿಗೆ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಂಡಿತ್ತು.

'ದೆಹಲಿ ಕರ್ನಾಟಕ ಸಂಘವನ್ನು ಹಾದು ಹೋಗುವಾಗ ಒಮ್ಮೆ ನಾನು ಇಲ್ಲಿಗೆ ಭೇಟಿ ನೀಡಬೇಕು ಎಂದು ಹಲವು ಬಾರಿ ಅನಿಸಿತ್ತು. ಆ ಆಸೆ ಇಂದು ನೆರವೇರಿತು ಎಂದು ಅಶ್ವಿನಿ ಹೇಳಿದಾಗ ನೆರೆದ ಕನ್ನಡಿಗರು ಹೆಮ್ಮೆಯಿಂದ ಕರತಾಡನಗೈದರು. ಸ್ವಲ್ಪವೇ ಆದರೂ ಚಿನ್ನದಂತಹ ಮಾತನಾಡಿದ ಅಶ್ವಿನಿ ತನ್ನ ಹೆತ್ತವರು ಹಾಗೂ ಗುರುಗಳ ಪ್ರೋತ್ಸಾಹವನ್ನು ನೆನೆದರು. ಪ್ರತಿಭಾನ್ವಿತ ಮಹಿಳಾ ಓಟಗಾರ್ತಿಯರು ನಮ್ಮಲ್ಲಿ ಬಹಳಷ್ಟು ಇದ್ದಾರೆ. ಆದರೆ ಹೆತ್ತವರ ಪ್ರೋತ್ಸಾಹ ಇಲ್ಲದೆ ಅವರು ಉನ್ನತ ಸಾಧನೆಯನ್ನು ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಅವರು ವಿಷಾದಿಸಿದರು. ಮುಂದಿನ ಒಲಿಂಪಿಕ್ಸ್‌ನಲ್ಲಿ ಮತ್ತೆ ಚಿನ್ನ ಗೆದ್ದು ನಿಮ್ಮನ್ನು ಕಾಣುವೆ ಎಂದು ಅಶ್ವಿನಿ ಆಶಿಸಿದರು.

ಬಂಟ್ಸ್ ಕಲ್ಚರಲ್ ಅಸೋಸಿಯೇಶನ್‌ನ ಅಧ್ಯಕ್ಷ ಶ್ರೀ ಎಂ.ಎನ್. ಶೆಟ್ಟಿಯವರು ಒಂದು ಲಕ್ಷ ರೂಪಾಯಿ ನಗದು ಬಹುಮಾನವನ್ನು ನೀಡಿ ಅಶ್ವಿನಿಯನ್ನು ಸನ್ಮಾನಿಸಿದರು. ಕೆಲವೇ ದಿನಗಳಲ್ಲಿ ಈ ಹಣವನ್ನು ಸಂಗ್ರಹಿಸಿದ ಬಂಟ್ಸ್ ಅಸೋಸಿಯೇಶನ್‌ನ ಪದಾಧಿಕಾರಿಗಳನ್ನು ಅವರು ಅಭಿನಂದಿಸಿದರು. ಪ್ರತಿಭೆಗಳನ್ನು ಈ ಬಗೆಯಲ್ಲಿ ಪ್ರೋತ್ಸಾಹಿಸಲು ಇಚ್ಛಾಶಕ್ತಿ ಇರಬೇಕು ಮತ್ತು ಇದು ಇತರರಿಗೆ ಮಾದರಿ ಎಂದು ಅವರು ಶ್ಲಾಘಿಸಿದರು. ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಂಘದ ಸ್ಮರಣಿಕೆಯನ್ನು ಹಾಗೂ ಉಪಾಧ್ಯಕ್ಷೆ ಶ್ರೀಮತಿ ಉಷಾ ಭರತಾದ್ರಿ ಅವರು ಅಭಿನಂದನಾ ಪತ್ರವನ್ನು ಅಶ್ವಿನಿಗೆ ನೀಡಿದರು.

ಅಶ್ವಿನಿಯನ್ನು ಅಭಿನಂದಿಸಿ ಮಾತನಾಡಿದ ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆ ಅವರು ದೇಶಕ್ಕೆ ಇಂದಿಗೂ ಕೀರ್ತಿ ತರುವ ಕೆಲಸವನ್ನು ಗ್ರಾಮೀಣ ಭಾಗದ ಜನರು ಮಾಡುತ್ತಿದ್ದಾರೆ. ಕ್ರೀಡೆ, ಜಾನಪದ ಮತ್ತು ಸಂಸ್ಕೃತಿಗೆ ಮಹತ್ತರ ಕೊಡುಗೆ ನೀಡುತ್ತಿರುವ ಗ್ರಾಮೀಣ ಜನರನ್ನು ಸರ್ಕಾರ ನಿರ್ಲಕ್ಷಿಸಬಾರದು. ಗ್ರಾಮೀಣ ಪ್ರತಿಭೆ ಅಶ್ವಿನಿಯ ಸಾಧನೆ ಭಾರತಕ್ಕೆ ಒಂದು ಸಂದೇಶ. ಈ ಸಂದೇಶವನ್ನು ಶಿವರಾಮ ಕಾರಂತರು ತಮ್ಮ 'ಬೆಟ್ಟದ ಜೀವ' ಕಾದಂಬರಿಯಲ್ಲಿ ಗೋಪಾಲಯ್ಯ ಹಾಗೂ ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಕಾದಂಬರಿ 'ಕರ್ವಾಲೋ' ದಲ್ಲಿ ಮಂದಣ್ಣನ ಪಾತ್ರದ ಮೂಲಕ ನೀಡಿದ್ದಾರೆ ಎಂದು ಬಿಳಿಮಲೆ ಸ್ಮರಿಸಿದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಶ್ರೀ ಕೆ.ಈಶ್ವರ ಭಟ್ ಅವರು ಅಶ್ವಿನಿ ಶೆಟ್ಟಿ ಕನ್ನಡಿಗರು ಹೆಮ್ಮೆಪಡುವಂತೆ ಮಾಡಿದ್ದಾರೆ. ಮತ್ತು ಭವಿಷ್ಯದಲ್ಲಿ ಅವರು ಇನ್ನಷ್ಟು ಸಾಧನೆ ಮಾಡಲಿ ಎಂದು ಹಾರೈಸಿದರು. ಬಂಟ್ಸ್ ಅಸೋಸಿಯೇಶನ್‌ನ ಕಾರ್ಯದರ್ಶಿ ಶ್ರೀ ಪ್ರೇಮನಾಥ ರೈ ಅವರು ಅಶ್ವಿನಿಗೆ ಶುಭ ಹಾರೈಸಿದರು.

ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ನೈಜೀರಿಯಾದ ಓಟಗಾರ್ತಿಯನ್ನು ಹಿಂದಿಕ್ಕಿ ರೋಮಾಂಚನಕಾರಿಯಾಗಿ ಭಾರತಕ್ಕೆ ಚಿನ್ನ ತಂದುಕೊಟ್ಟ ಅಶ್ವಿನಿ ನಂತರ ಚೀನಾದಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಡಬಲ್ ಚಿನ್ನದ ಪದಕ ಗಳಿಸಿದ್ದರು. ಕರ್ನಾಟಕದ ಉಡುಪಿ ಜಿಲ್ಲೆಯ ಕುಂದಾಪುರದ ಸಮೀಪ ಇರುವ ಸಿದ್ದಾಪುರದ ಅಶ್ವಿನಿ ಬೆಳೆದು ಬಂದ ಹಾದಿಯನ್ನು ವೈ. ಅವನೀಂದ್ರನಾಥ್ ರಾವ್ ಅವರು ಸಭೆಗೆ ಪರಿಚಯಿಸಿದರು. ಅನನ್ಯ ಕ್ರೀಡಾ ಪ್ರತಿಭೆ ಅಶ್ವಿನಿ ಅಕ್ಕುಂಜಿಯವರನ್ನು ಸಂಘಕ್ಕೆ ಕರೆತಂದ ರುವಾರಿ ಶ್ರೀ ಟಿ. ಶಿವಪ್ರಸಾದ್ ಶೆಟ್ಟಿ. ಆರ್. ರೇಣುಕುಮಾರ್ ವಂದಿಸಿದರು. ಎನ್.ಆರ್. ಶ್ರೀನಾಥ್ ಕಾರ್ಯಕ್ರಮ ನಿರ್ವಹಿಸಿದರು.

❑ **ವೈ. ಅವನೀಂದ್ರನಾಥ್ ರಾವ್**

ಅಭಿಮತ
ಸಂಪುಟ 21 ಸಂಚಿಕೆ 4
ಜನವರಿ 2011, ಬೆಲೆ ರೂ. 1

ಪ್ರಧಾನ ಸಂಪಾದಕರು
ವಸಂತ ಶೆಟ್ಟಿ ಬೆಳ್ಳಾರೆ

ಸಂಪಾದಕ ಮಂಡಳಿ
ಮಹಾಬಲೇಶ್ವರ ಭಟ್ ಕೆ.
ಸಂತೋಷ್ ಕುಮಾರ್ ಉಪಾಧ್ಯಾಯ
ಡಾ. ಸುಮಂಗಲಾದೇವಿ
ನಂದಿನಿ ಮಲ್ಯ
ಸಾಮ್ರಾಟ್ ಗೌಡ
ಸರೋಜಾ ವಿಜಯಕುಮಾರ್

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ
ಅಧ್ಯಕ್ಷರು
ಸಿ.ವಿ. ಗೋಪಿನಾಥ್

ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
ಉಷಾ ಭರತಾದ್ರಿ

ಪ್ರಧಾನ ಕಾರ್ಯದರ್ಶಿ
ಆರ್. ರೇಣುಕುಮಾರ್

ಖಜಾಂಚಿ
ಎಂ.ವಿ. ವೆಂಕಟೇಶ್

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ಡಾ. ಹೇಮಲತಾ ಮೂರ್ತಿ

ಸಮಿತಿ ಸದಸ್ಯರು
ಅಂಜನಿ ಗೌಡ
ಹರಿಶ್ಚಂದ್ರ ಬಂಟ್ವಾಳ್
ಟಿ.ಎಂ. ಮೈಲಾರಪ್ಪ
ವಿ.ವಿ. ಬಿರಾದಾರ
ಸಿ.ಆರ್. ಶ್ರೀನಿವಾಸ
ಕೆ.ಎಸ್.ಜಿ. ಶೆಟ್ಟಿ
ರಾಧಾಕೃಷ್ಣ
ಭಂಡಾರ್‌ಕರ್ ಎಸ್.ಎಲ್
ಇಸ್ಮಾಯಿಲ್ ಬುಡಂದಿ
ಬಿ.ಆರ್.ಮಹಾಲಿಂಗಪ್ಪ

**DELHI KARNATAKA SANGHA**
Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com

## ನಿಮ್ಮೊಂದಿಗೆ

**ಸಮಸ್ತ ಕನ್ನಡಿಗರಿಗೆ**

**ಹೊಸ ವರ್ಷದ**

**ಹಾರ್ದಿಕ**

**ಶುಭಾಶಯಗಳು**

ಈ ಹೊಸ ವರ್ಷದ 'ಅಭಿಮತ' ನಿಮ್ಮ ಕೈ ಸೇರುವ ವೇಳೆಗೆ ಪ್ರಸ್ತುತ ಕಾರ್ಯಕಾರಿ ಸಮಿತಿಯ ಅವಧಿ ಮುಗಿದು 2011–13ರ ಅವಧಿಗಾಗಿ ನೂತನ ಕಾರ್ಯಕಾರಿ ಸಮಿತಿ ಅಸ್ತಿತ್ವಕ್ಕೆ ಬಂದಿರುತ್ತದೆ. ಅಭಿಮತಕ್ಕೂ ಕೂಡಾ ನೂತನ ಸಂಪಾದಕ ಮಂಡಳ ಬರಲಿದೆ. ಇದು ನಮ್ಮ ಸಂಪಾದಕ ಮಂಡಳಿಯ ಕೊನೆಯ ಸಂಚಿಕೆ. ಈ ಸಂದರ್ಭದಲ್ಲಿ ಈ ಎರಡು ವರ್ಷ ಅಭಿಮತವನ್ನು ಅತ್ಯುತ್ತಮವಾಗಿ ಹೊರತರಲು ಸಹಕರಿಸಿದ ಸಂಪಾದಕ ಮಂಡಳಿಗೂ, ಕಥೆ, ಕವನ ಹಾಗೂ ಲೇಖನಗಳನ್ನು ನೀಡಿದ ಎಲ್ಲರಿಗೂ, ಜಾಹೀರಾತುಗಳನ್ನು ನೀಡಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳು.

ಮುಂಬರುವ ನೂತನ ಕಾರ್ಯಕಾರಿ ಸಮಿತಿಗೆ ಇನ್ನೂ ಹೆಚ್ಚಿನ ಸಹಕಾರ ಪ್ರೋತ್ಸಾಹ ಸಿಗಲಿ ಎಂದು ಶುಭವನ್ನು ಅಭಿಮತ ಸಂಪಾದಕ ಮಂಡಳಿಯ ಪರವಾಗಿ ಹಾರೈಸುತ್ತೇನೆ.

❑ **ವಸಂತ ಶೆಟ್ಟಿ ಬೆಳ್ಳಾರೆ**
**ಸಂಪಾದಕರು**



**ಸನ್ಮಿತ್ರರೇ, ಬಂಧುಗಳೇ ಹಾಗೂ ಈವರೆಗೆ ನನ್ನನ್ನು ಸಲಹಿ, ಪ್ರೋತ್ಸಾಹಿಸಿ, ಬೆಳೆಸಿದ ಆತ್ಮೀಯ ಕನ್ನಡಿಗರೇ,**

ಈ ಬಾರಿಯ ನನ್ನ ಕೊನೆಯ ಮುನ್ನೋಟ–ತಮ್ಮ ಕೈ ಸೇರುವ ಹೊತ್ತಿಗಾಗಲೇ ಮುಂದಿನ ಎರಡು ವರ್ಷಗಳಿಗೆ ಸಂಘವನ್ನು ನಡೆಸಲು ತಾವುಗಳೆಲ್ಲರೂ ಆರಿಸಿದ ಕಾರ್ಯಕಾರಿ ಸಮಿತಿ ಸಜ್ಜಾಗಿರುತ್ತದೆ. ಹಾಗಾಗಿ ಕಳೆದೆರಡು ವರುಷ ನನ್ನನ್ನು ಹಾಗೂ ನನ್ನೊಂದಿಗೆ ತಾವು ಆರಿಸಿದ ಕಾರ್ಯಕಾರಿ ಸಮಿತಿಯ ಪರವಾಗಿ ತಮಗೆಲ್ಲಾ ಹೃದಯಪೂರ್ವಕ ಧನ್ಯವಾದಗಳನ್ನರ್ಪಿಸುತ್ತಾ ನನ್ನ ಕೆಲವು ಅಭಿಪ್ರಾಯಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಲಿಚ್ಛಿಸುತ್ತೇನೆ. ಹೃದಯಕ್ಕತ್ತಿರವಾದ ನನ್ನ ಆತ್ಮೀಯರಿಗರ್ಪಿಸುತ್ತಿರುವ ಈ ನಮನಗಳು ಎಲ್ಲರ ಮನ ಮುಟ್ಟಲೆಂಬುದು ನನ್ನ ಆಶಯ.

ಡಿಸೆಂಬರ್ 27ರ ಬೆಳಗ್ಗೆ 4ಗಂಟೆಗೆ ಸರಿಯಾಗಿ ಏನೋ ಕಾರಣಕ್ಕೆ ಎಚ್ಚರ ಅಗ್ಬೋಯ್ತು, ಆಮೇಲೆ ಎಷ್ಟೇ ಪ್ರಯತ್ನ ಮಾಡಿದ್ರೂ ನಿದ್ರೆ ಬರಲೇ ಇಲ್ಲ. ಡಿಸೆಂಬರ್ ಚಳೀಲಿ ನಿದ್ರ ಒಂದ್ಸರಿ ಹೋದ್ರೆ ಎಷ್ಟು ಕಷ್ಟ ಅಂತ ನಾನು ದೆಹಲಿಯವರ್ಗ್ಹೇಳಬೇಕೆ; ಏನೋ ನನ್ನ ಯೋಚನೆ ದಿಢೀರ್ ಅಂತ ಸಂಘದ ಕಡೆಗ್ಹೋಯ್ತು, ನಾನು ಸಾಧಾರಣ ಮನುಷ್ಯ ಅಲ್ವೇ. ಚುನಾವಣೆ ಬೇಡ ಅಂತ ಬಿಟ್ರುನೂ, ನೀವೆಲ್ಲ ನನಗೆ ಕೊಟ್ಟ ಪ್ರೀತಿ, ಗೌರವ ಎಲ್ಲ ಹೆಂಗ್ ಅಷ್ಟು ಸುಲಭವಾಗಿ ಮರೆಯೋದು? ಹಾಗಾಗಿ ಏನಾದರೂ ಬರೀಬೇಕು – ಕೆಲವು ವಿಷಯನ ನಿಮ್ಮೊಂದಿಗೆ ಹಂಚ್ಕೋಬೇಕು ಅನ್ನಿಸ್ತು.

ನೀವೆಲ್ಲರೂ ನನ್ನ ಒಂದು ಮಾತನ್ನು ಬಹುಶ: ಒಪ್ಪುತ್ತೀರಿ. ಅದೇನೆಂದ್ರೆ ನನ್ನ ಒಂದು ಉದ್ದೇಶ ಏನೂಂದ್ರೆ–ಕರ್ನಾಟಕ ಸಂಘ–ಒಂದು ಸಾಂಸ್ಕೃತಿಕ ಸಂಘ–ಇಲ್ಲಿ ಬರೋ ಎಲ್ಲ ಕನ್ನಡಿಗರಿಗೂ ಪ್ರೀತಿ, ಗೌರವ, ಆದರಗಳು ಸಿಗಬೇಕು. ಮತ್ತೆ ಅವರೆಲ್ಲರೂ ತಾವು ಸಹ ಸಂಘದ ಅವಿಭಾಜ್ಯ ಆಗಬೇಕು ಅನ್ನೋದು. ಅದು ಹೇಗೆ ಸಾಧ್ಯ? ಸಾಧಿಸುವ ಪರಿ ಹೇಗೆ? ನನ್ನ ವಿಷಯ ತಗೊಂಡ್ರೆ ಹ್ಞಾ–ಎಲ್ಲರ ಮಧ್ಯೆ ಸಂತೋಷವಾಗಿ ಕಾಲ ಕಳೀಬೇಕು. ಹಿರಿಯರಿಗೆ ತಮ್ಮಿಂದ ದೂರ ಇರೋ ಮಗನ್ನ ನೆನಪಿಸೋ ಹಾಗೋ, ಸಮಾನ ವಯಸ್ಕರಿಗೆ–ಅಣ್ಣ–ತಮ್ಮನಾಗಿ, ಸಮಾನ ಮನಸ್ಕರಿಗೆ ಸ್ನೇಹಿತನಾಗಿ, ಹಲವರಿಗೆ ಬಂಧುವಾಗಿ ಬಳಗವಾಗಿ ಎಲ್ಲರ ಪ್ರೀತಿಗೆ ಪಾತ್ರವಾಗೋದು ನನ್ನ ಉದ್ದೇಶ ಆಗಿತ್ತು. ಯಾವುದೇ ಒಂದು ಸಂಘ ಸಂಸ್ಥೆಯ ಮೂಲ ಉದ್ದೇಶ ಅದೇ. ಹಾಗಾಗಿ ನನ್ನ ಉದ್ದೇಶ ಈಡೇರಿದೆ. ನನಗೆ ತಮ್ಮಿಂದ ದೊರೆತ ಪ್ರೀತಿಗೆ ಸರಿಸಾಟಿಯಿಲ್ಲ ಹಾಗೂ ನಾನು ಸಹ ತಮ್ಮ ಪ್ರೀತ್ಯಾದರಾಗಳಿಗೆ ಧಕ್ಕೆ ಬಾರದ ರೀತೀಲಿ ನಡೆದುಕೊಂಡಿದ್ದೀನಿ. ಸಂಘದ ಸಭಾಂಗಣ ಪ್ರವೇಶಿಸುತ್ತಿದ್ದಂತೆ ಹಲವರ ಮುಖದಲ್ಲಾದ ಸಂತಸ ಮರೆಯೋದು ಹೇಗೆ?.

ಇನ್ನು ಆಡಳಿತ. ಕಳೆದೆರಡು ವರ್ಷಗಳಲ್ಲಿ ಸಂಘ ಈ ಹಿಂದಿನ ಎಲ್ಲಾ ಅವಧಿಗೆ ಹೋಲಿಸಿದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈಗಾಗಲೇ ಕೆಲವು ವಿಷಯಗಳಲ್ಲಿ ನಾವಂದುಕೊಂಡಷ್ಟು ಕೆಲಸ ಮಾಡಲಿಕ್ಕಾಗಲಿಲ್ಲ. ಅದರಲ್ಲೂ ವಿಶೇಷವಾಗಿ ದೇಣಿಗೆ ಸಂಗ್ರಹದ ವಿಷಯದಲ್ಲಿ ನಮ್ಮಗಳ ಸಾಧನೆ ಗೌಣ್ಯ. ಅದಾಗ್ಯೂ ಇರುವ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಬಳಸಿ, ಸಂಘದ ಎಲ್ಲಾ ಹಣಕಾಸಿನ ಬಾಧ್ಯತೆಗಳನ್ನು ವ್ಯವಸ್ಥಿತವಾಗಿ ಪಾವತಿಸಿರುತ್ತೇವೆ. ಈ ಹಿಂದೆ ಬಾಕಿ ಇದ್ದ ಕಟ್ಟಡ ಸಂಬಂಧಿ ಬಾಕಿ ವಿತರಣೆ ಸಂಪೂರ್ಣ ಮುಗಿದಿದೆ. ಸಂಘದ ಆದಾಯ ಮಟ್ಟ ಹೆಚ್ಚಿದ್ದು ಸಂಘದ ಹಣಕಾಸು ಸುಸ್ಥಿತಿಯಲ್ಲಿದೆ.

ಹೌದು ನಾವು ಮಾಡಲಾಗದ ಕೆಲವು ಕಾರ್ಯಗಳಲ್ಲಿ ಪಿಕ್‌ನಿಕ್ ಹಾಗೂ ಈ ವರ್ಷದ ಆಟೋಟ ಸ್ಪರ್ಧೆ ಆಯೋಜನೆ. ತಮಗೆಲ್ಲ ತಿಳಿದಿರುವಂತೆ ಸಂಘದ ಸದಸ್ಯತ್ವ ಸಂಖ್ಯೆ ಇದೀಗ 3764 ಮುಟ್ಟಿದ್ದು ಇಂತಹ ಪರಿಸ್ಥಿತಿಯಲ್ಲಿ ಪಿಕ್‌ನಿಕ್ ಆಯೋಜಿಸಿದಲ್ಲಿ ಸುಮಾರು 1000 ಜನರು ಸೇರಬಹುದಾಗಿದ್ದು, ದೆಹಲಿಯಂತಹ ವಿಸ್ತಾರ ಪ್ರದೇಶಗಳಲ್ಲಿ ಮೂಲೆ ಮೂಲೆಗಳಿಂದ ಇವರನ್ನೆಲ್ಲಾ ಕರೆತಂದು ಪಿಕ್‌ನಿಕ್ ಆಯೋಜಿಸುವುದು ಬಹಳ ಕಷ್ಟಸಾಧ್ಯವಾಗಿದ್ದು ಇದರ ಆಯೋಜನೆಗೆ ಬೇಕಾದ ಸೂಕ್ತ ಸಮಯದ ಅಭಾವದಿಂದಾಗಿ ಈ ಕಾರ್ಯ ಸಾಧಿಸಲಾಗಲಿಲ್ಲ. ಅದೇ ರೀತಿ ಕಾಮನ್‌ವೆಲ್ತ್ ಕ್ರೀಡಾಕೂಟ, ಮಕ್ಕಳ ಪರೀಕ್ಷೆ, ಅತೀವ ಬೇಸಿಗೆ ಹಾಗೂ ಚಳಿಗಾಲಗಳಿಂದಾಗಿ–ತಿಂಗಳ ಕಾಲ ನಡೆಯುವ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸುವುದೂ ಕಷ್ಟವಾಯಿತು.

ಇವುಗಳೆಲ್ಲಕ್ಕೂ ನಾನು ತಿಳಿಸಿದ ಕಾರಣಗಳಿಗೂ ಮಿಗಿಲಾದ ಕಾರಣಗಳಿವೆ. ಏನು ಮಾಡೋದು 'ಮನಸು ಹೇಳ ಬಯಸಿದೆ ನೂರೊಂದು–ತುಟಿಯ ಮೇಲೆ ಬಾರದಿದೆ ಮಾತೊಂದು'.

ಆದ್ರೂ ಒಂದು ವಿಷಯ ನಿಮ್ಮ ಹತ್ರ ಹೇಳ್ಕೋಬೇಕು ಅನ್ನಿಸ್ತಾ ಇದೆ. 3764 ಸದಸ್ಯರ ಪೈಕಿ ಸಂಘ, ಚುನಾವಣೆ–ಆಡಳಿತ–ಸ್ಥಾನ–ಕುರ್ಚಿ ಅಂತ ಮಾತಾಡೋ ನನ್ನಂತ–ಪಾಸ್ಟ್ ಪ್ರೆಸೆಂಟ್ ಮತ್ತು ಫ್ಯೂಚರ್–ಲೀಡರ್‌ಗಳು ಮಾಡೋ ಕಮೆಂಟ್ ಕೇಳಬೇಕ್ರಿ. ಯಾರ್ನೂ ಬಿಡಲ್ಲ–ಏನೂ ಯೋಚನೇನೆ ಮಾಡ್ದೆ–ಮಾತಾಡೋದು, ತೇಜೋವಧೆ ಮಾಡೋದು, ಹುಳ ಬಿಟ್ಟು ತಮಾಷೆ ನೋಡೋದು. ಈ ಹೊತ್ನಲ್ಲಿ ನನಗೆ ಜ್ಞಾಪಕ ಬರೋದೇನೆಂದರೆ ಇಲ್ಲಿ 3 ತರಹದ ಜನ ಇದ್ದಾರೆ. ಒಂದು ಚುನಾವಣೆ, ಆಡಳಿತ ಅಂತ ಮಾತಾಡೋರು, ಒಂದು ಬರೀ ಓಟ್ಹಾಕೋಕೆ ಬರೋರು ಎಲ್ಲರಿಗಿಂತ ಮುಖ್ಯವಾದೋರು–ಪಾಪ ಎಲ್ಲಾ ಕಾರ್ಯಕ್ರಮಗಳಿಗೆ ಚಳಿ, ಮಳೆ, ಗಾಳಿ ಅನ್ನದೇ ಬಂದು ಕಾರ್ಯಕ್ರಮಗಳಿಗೆ ಪ್ರೋತ್ಸಾಹಿಸಿ ಸಂಘದ ಒಳಿತಿಗಾಗಿ ಯೋಚನೆ ಮಾಡೋ ಜನರು. ಹಾಗಾಗಿ ಅವರಿಗೆ ನನ್ನ ಹ್ಯಾಟ್ಸಾಪ್.

ಕಳೆದೆರಡು ವರ್ಷ ನನ್ನೊಂದಿಗೆ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ದುಡಿದ ಸಮಿತಿಯ ಸದಸ್ಯರಿಗೆ ಹಾಗೂ ಪದಾಧಿಕಾರಿಗಳಿಗೆ ನನ್ನ ವಂದನೆಗಳನ್ನರ್ಪಿಸುತ್ತಾ, ಮುಂದಿನ ಕಾರ್ಯಕಾರಿ ಸಮಿತಿಗೆ ಉತ್ತಮ ಕಾರ್ಯ ನಿರ್ವಹಿಸುವಂತಹ ವಾತಾವರಣ ಮೂಡಲಿ, ಸಂಘ ಬೆಳೆಯಲಿ ಅಂತ ಹಾರೈಸುತ್ತಾ–ನಿಮಗೆಲ್ಲಾ ನನ್ನ ಹೃದಯಪೂರ್ವಕ ನಮನಗಳನ್ನರ್ಪಿಸುತ್ತೇನೆ.

## "ಸಿರಿಗನ್ನಡಂ ಗೆಲ್ಗೆ"

❑ **ಆರ್.ರೇಣುಕುಮಾರ್**
**ಪ್ರಧಾನ ಕಾರ್ಯದರ್ಶಿ**

ಕರ್ನಾಟಕದ ಕಲಾವಿದರಿಂದ ಚಿತ್ರಕಲಾ ಪ್ರದರ್ಶನ ಜನವರಿ 18 ರಿಂದ 24ರವರೆಗೆ ದೆಹಲಿಯ AIFACS ಗ್ಯಾಲರಿ, ನಂ–1, ರಫೀ ಮಾರ್ಗ, ನವದೆಹಲಿಯಲ್ಲಿ ನಡೆಯಲಿದೆ. ಭಾಗವಹಿಸುವ ಕಲಾವಿದರು : ಶ್ರೀ ಸುಧೀರ್ ಫಡ್ನೀಸ್, ಶ್ರೀ ಬಿ.ಪಿ. ಕಾರ್ತಿಕ್, ಶ್ರೀ ಡಿ.ಕೆ. ಕಮಾಕರ್, ಶ್ರೀ ಡಿ.ಎಂ. ಬಡಿಗೇರ್, ಶ್ರೀ ಚಿಕ್‌ಮತ್ ಎಫ್.ವಿ., ಶ್ರೀ ರಮೇಶ್ ಎಚ್. ಪಚ್‌ಪಾಂಡೆ.

## ಉಚಿತ ವೈದ್ಯಕೀಯ ತಪಾಸಣೆ

ಜನವರಿ ತಿಂಗಳ 30ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

❑ **ಪ್ರಧಾನ ಕಾರ್ಯದರ್ಶಿ**

ಕರ್ನಾಟಕ ಸರ್ಕಾರ
ವಾರ್ತಾ ಇಲಾಖೆ
ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ
ಹಾಗೂ
ದೆಹಲಿ ಕರ್ನಾಟಕ ಸಂಘ, ನವದೆಹಲಿ
ಇವರ ಸಂಯುಕ್ತ ಆಶ್ರಯದಲ್ಲಿ

## ಕನ್ನಡ ಚಲನಚಿತ್ರ ಪ್ರದರ್ಶನ

**ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ**
**ರಾವ್ ತುಲಾರಾಂ ಮಾರ್ಗ್, ಸೆ. 12, ಆರ್.ಕೆ. ಪುರಂ, ನವದೆಹಲಿ- 110022**

**ದಿನಾಂಕ : 16.01.2011 ರ ಭಾನುವಾರ**
**ಸಂಜೆ : 5 ಘಂಟೆಗೆ**
ನಿರ್ದೇಶನ : ಯೋಗರಾಜ ಭಟ್, ದಿಗಂತ ಮತ್ತು ಐಂದ್ರಿತ ರೈ ಅಭಿನಯದ

# ಮನಸಾರೆ

**ಶಿವಮೊಗ್ಗ ಜಿಲ್ಲಾ ಅವಲೋಕನ ಕುರಿತ**
**ಸಾಕ್ಷ್ಯ ಚಿತ್ರ**
**ನಿರ್ಮಾಣ : ವಾರ್ತಾ ಇಲಾಖೆ**

ನೀವೂ ಬನ್ನಿ, ನಿಮ್ಮ ಕುಟುಂಬದವರು ಮತ್ತು ಸ್ನೇಹಿತರನ್ನೂ ಕರೆತನ್ನಿ!
ಉಪ ನಿರ್ದೇಶಕರು, ಕರ್ನಾಟಕ ವಾರ್ತಾ ಕೇಂದ್ರ
ಕರ್ನಾಟಕ ಭವನ-2, ನಂ. 6. ಸರ್ದಾರ್ ಪಟೇಲ್ ಮಾರ್ಗ್, ಚಾಣಕ್ಯಪುರಿ, ನವದೆಹಲಿ- 110021.
ದೂರವಾಣಿ: 011-24102263, ಮೊಬೈಲ್: +91 99686 52139

## ಅಭಿನಂದನೆ



ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿ ಹಾಗೂ ದೆಹಲಿಯ ವಿವಿಧ ಸಂಘ-ಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಚಿರಪರಿಚಿತರಾದ, ನಮ್ಮಗಳ ನೆಚ್ಚಿನ ಡಾ. ಹೇಮಲತಾ ಮೂರ್ತಿಯವರಿಗೆ ಇತ್ತೀಚೆಗೆ ತಿಲಕ್ ಮಹಾರಾಷ್ಟ್ರ ವಿಶ್ವವಿದ್ಯಾಲಯ, ಪುಣೆಯು ಅವರ "A Social, Economic and Psychological Study of Elderly Persons with Chronic Illness - emphasis on the shift to Naturopathy and Yoga Therapies to Improve their Quality of Life." ಎಂಬ ಪ್ರಬಂಧಕ್ಕೆ (ಥೀಸೀಸ್) ತನ್ನ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕ್ಷೇತ್ರದಲ್ಲಿ ಅವರು ಸಲ್ಲಿಸುತ್ತಿರುವ ಗಣನೀಯ ಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆಯು 2003-2004ರ ಸಾಲಿನ "ಪತಂಜಲಿ ಸ್ವರ್ಣ ಪದಕ"ವನ್ನು ನೀಡಿ ಗೌರವಿಸಿದೆ. ಇವರು ಕರ್ನಾಟಕದಲ್ಲಿ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸೆ ಯೋಗ ಕಾಲೇಜು, ಬೆಂಗಳೂರಿನ ಜಿಂದಾಲ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಆಸ್ಪತ್ರೆ ಹಾಗೂ ಹುಬ್ಬಳ್ಳಿಯ ಪ್ರಕೃತಿ ಚಿಕಿತ್ಸೆ ಹಾಗು ಯೋಗ ಆಸ್ಪತ್ರೆಯಲ್ಲಿ 15ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಡಾ. ಮೂರ್ತಿಯವರು ಈ ಸ್ವರ್ಣ ಪದಕ ಪಡೆದ ಪ್ರಥಮ ಮಹಿಳೆಯಾಗಿದ್ದಾರೆ. ಅಲ್ಲದೆ ಇವರ ಪತಿ ಡಾ. ಬಿ.ಟಿ. ಚಿದಾನಂದ ಮೂರ್ತಿಯವರಿಗೂ ಸಹ ಈ ಪತಂಜಲಿ ಸ್ವರ್ಣ ಪದಕವನ್ನು 1991-92 ಸಾಲಿಗೆ ನೀಡಿ ಗೌರವಿಸಿದ್ದಾರೆ. ಕರ್ನಾಟಕದಲ್ಲಿ ಪತಂಜಲಿ ಸ್ವರ್ಣ ಪದಕ ಪಡೆದ ಪ್ರಥಮ ದಂಪತಿಗಳಾಗಿದ್ದಾರೆ. ಮುಂದೆ ಡಾ. ಹೇಮಲತಾ ಮೂರ್ತಿ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಲಭಿಸಲೆಂದು ಆಶಿಸುತ್ತೇವೆ. ಅವರಿಗೆ ದೆಹಲಿ ಕನ್ನಡಿಗರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು



**ಕೃಷ್ಣಮೂರ್ತಿ ಕಲುಮಂಗಿ ಅವರಿಗೆ ಅನುವಾದಿತ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ**

ಪ್ರಿಯಾಂಕ ಮತ್ತು ಶರ್ವಾಣಿ ಸ್ಮಾರಕ ಬೆನಕ ಅನುವಾದಿತ ಕಥಾ-2010ರ ಸ್ಪರ್ಧೆಯಲ್ಲಿ ಸಂಘದ ಅಜೀವ ಸದಸ್ಯರಾಗಿರುವ ಸಾಹಿತಿ ಕೃಷ್ಣಮೂರ್ತಿ ಕಲುಮಂಗಿ ಅವರು ತೆಲುಗಿನಿಂದ ಅನುವಾದಿಸಿದ "ಮಾಡೆಲ್" ಎಂಬ ಕಥೆಗೆ ಪ್ರಥಮ ಬಹುಮಾನ ಪಡೆದಿದ್ದಾರೆ, ಪುರಸ್ಕಾರ ರೂಪದಲ್ಲಿ ಅವರು ಪ್ರಶಸ್ತಿ ಪತ್ರ ಹಾಗು ಮೂರು ಸಾವಿರ ರೂಪಾಯಿಗಳನ್ನು ಪಡೆದಿದ್ದಾರೆ. ಹೆಸರಾಂತ ತೆಲುಗು ಲೇಖಕರಾದ ಶ್ರೀ ವಕ್ಕಂತಂ ಸೂರ್ಯನಾರಾಯಣ ರಾವ್ ಅವರ ಅದೇ ಹೆಸರಿನ ತೆಲುಗು ಕಥೆಯನ್ನು ಕೃಷ್ಣಮೂರ್ತಿ ಅವರು ಸ್ಪರ್ಧೆಗೆ ಕಳುಹಿಸಿದ್ದರು. ಈ ಕಥೆಯು ತೆಲುಗಿನಲ್ಲಿ ಮೂಲ ಲೇಖಕರಿಗೆ ಅಪಾರ ಹೆಸರು ಹಾಗು ಕೀರ್ತಿಯನ್ನು ತಂದು ಕೊಟ್ಟಿದೆ. ಈ ಕಥೆಯು ಆಂಗ್ಲ ಭಾಷೆಯಲ್ಲಿಯೂ ಅನುವಾದಗೊಂಡಿದೆ.

ಈ ಸ್ಪರ್ಧೆಯಲ್ಲಿ ಕೃಷ್ಣಮೂರ್ತಿ ಕಲುಮಂಗಿ ಹಾಗು ಅವರ ಶ್ರೀಮತಿ ತುಳಸಾ ಕಲುಮಂಗಿ ಅವರುಗಳು ಇದುವರೆಗೆ ಐದನೇ ಬಾರಿ ಈ ಪ್ರಶಸ್ತಿಯನ್ನು ಗಳಿಸಿರುವರು. ಈ ಸಂದರ್ಭದಲ್ಲಿ ಕೃಷ್ಣಮೂರ್ತಿ ಕಲುಮಂಗಿ ಅವರ "ಮದುವೆ ತಂದ ಮೋ(ಗೋ)ಜು" ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ದತ್ತಿ ಪ್ರಶಸ್ತಿ ಬಂದುದನ್ನು ಮತ್ತು "ಅಶಾಸೌಧ" ಕೃತಿಯು ಓದುಗರ ಹಾಗು ವಿಮರ್ಶಕರ ಅಪಾರ ಮನ್ನಣೆಯನ್ನು ಪಡೆದುದನ್ನು ನಾವು ನೆನೆಯಬಹುದು. ಅಲ್ಲದೆ ಕೃಷ್ಣಮೂರ್ತಿ ಕಲುಮಂಗಿ ಅವರು ತಮ್ಮ ಹಾಸ್ಯ ಲೇಖನಗಳಿಗಾಗಿ ಅನೇಕ ಬಹುಮಾನಗಳನ್ನು ಪಡೆದಿರುವರು. ಅವರು ಕಳೆದ ನಾಲ್ಕು ವರ್ಷಗಳಿಂದ ಸಂಘದ ಸಾಹಿತ್ಯಕ ಸಭೆಯ ಸದಸ್ಯರಾಗಿರುವರು.

ದೆಹಲಿ ಕರ್ನಾಟಕ ಸಂಘವು ಕೃಷ್ಣಮೂರ್ತಿ ಕಲುಮಂಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.

# ಹಿಂದೀ ಯಕ್ಷಗಾನ:
# ನಮ್ಮ ಕಾಲದ ಒಂದು ದೊಡ್ಡ ಘಟನೆ

ಯಕ್ಷಗಾನವನ್ನು ಅದರ ಸಾಂಪ್ರದಾಯಿಕ ಪರಿಧಿಯ ಆಚೆ ತೆಗೆದುಕೊಂಡು ಹೋಗಿ ಹೊಸ ಪ್ರೇಕ್ಷಕರಿಗೆ ಹೇಗೆ ಪ್ರದರ್ಶಿಸಬೇಕು ಎಂಬ ಬಗ್ಗೆ ನಮಗಿನ್ನೂ ಖಚಿತವಾದ ತಿಳುವಳಿಕೆಯಿಲ್ಲ, ಯಕ್ಷಗಾನದ ಸಾಂಪ್ರದಾಯಿಕ ಪ್ರದರ್ಶನದ ಪ್ರದೇಶಗಳಾದ ದಕ್ಷಿಣೋತ್ತರ ಜಿಲ್ಲೆಗಳಲ್ಲಿಯ ಪ್ರೇಕ್ಷಕರಿಗೆ ಯಕ್ಷಗಾನದ ಬಗ್ಗೆ ಪೂರ್ವ ತಿಳುವಳಿಕೆ ಇರುವುದರಿಂದ ಪ್ರದರ್ಶನ ಅಂತಹ ಸಮಸ್ಯೆಗಳೇನನ್ನೂ ಎದುರಿಸುವುದಿಲ್ಲ. ಆದರೆ, ಈ ಪ್ರದೇಶದ ಹೊರಗಿನವರಿಗೆ ಯಕ್ಷಗಾನದ ಎಲ್ಲಾ ಅಂಗಗಳೂ ಕೂಡ ಹೊಸದು. ಎಷ್ಟೋ ಬಾರಿ ಕಲಾಪ್ರಕಾರವೊಂದರ ಸಂಕೇತಗಳು ಪ್ರದೇಶ, ಕಾಲ ಮತ್ತು ಸಮುದಾಯಕ್ಕೆ ಒಳಪಟ್ಟಿರುವುದರಿಂದ ಅವು ಸಾರ್ವಕಾಲಿಕ ಅಭಿವ್ಯಕ್ತಿಯನ್ನೇನೂ ಸಾಧಿಸುವುದಿಲ್ಲ. ಇದರ ಬಗ್ಗೆ ಖಚಿತ ತಿಳುವಳಿಕೆಯಿದ್ದ ಡಾ. ಶಿವರಾಮ ಕಾರಂತರು ಬಡಗು ತಿಟ್ಟು ಯಕ್ಷಗಾನದ ಪ್ರಾದೇಶಿಕ ಸಂಕೇತಗಳನ್ನು ಸಾರ್ವಕಾಲಿಕ ಸಂಕೇತಗಳಾಗಿ ಮಾರ್ಪಡಿಸಲು ಹೆಣಗಿದರು. ಈ ಹೆಣಗಾಟದಲ್ಲಿ ಅವರು, ಅತ್ತ ಸಾಂಪ್ರದಾಯಿಕವೂ ಅಲ್ಲದ, ಇತ್ತ ಪೂರ್ತಿ ಪಾಶ್ಚಾತ್ಯವೂ ಅಲ್ಲದ ಮಧ್ಯಮ ಮಾರ್ಗವೊಂದನ್ನು ಅನುಸರಿಸಿದರು. ವಿದೇಶೀ ಸಂಗೀತವಾದನಗಳನ್ನು ಯಕ್ಷಗಾನಕ್ಕೆ ಜೋಡಿಸಿದರು. ಬಣ್ಣಗಾರಿಕೆಯಲ್ಲಿ ಮತ್ತು ನೃತ್ಯದಲ್ಲಿ ಹೆಚ್ಚಿನ ನಾಜೂಕು ತನವನ್ನು ತೋರಿಸಿದರು. ಈ ಪ್ರಯೋಗ ಪಾಶ್ಚಾತ್ಯರಿಗೆ ತುಂಬ ಇಷ್ಟವಾಯಿತೆಂಬ ಮಾತು ಈಗ ಚರಿತ್ರೆಗೆ ಸೇರಿದ ಸಂಗತಿ. ತೊಂಭತ್ತರ ದಶಕದಲ್ಲಿ, ಪಾಶ್ಚಾತ್ಯರಿಗೆ ಯಕ್ಷಗಾನ ತೋರಿಸುವ ಪ್ರಸಂಗ ಬಂದಾಗ ನಾನು ಈ ಬಗ್ಗೆ ಗಂಭೀರವಾಗಿ ಯೋಚಿಸಿದ್ದೆ. ಕಾರಂತರು, 'ಪರಂಪರೆಯ ಮಿತಿಗಳು' ಎಂಬ ಲೇಖನ ಬರೆದರೆ, ನಾನು 'ಪರಂಪರೆಯ ಶಕ್ತಿ' ಎಂಬ ಲೇಖನವನ್ನು ಬರೆದು ಯಕ್ಷಗಾನವನ್ನು ವಿದೇಶೀಯರಿಗೆ ಪರಿಚಯಿಸುವಾಗ ಪರಂಪರೆಯನ್ನು ಬಿಟ್ಟುಕೊಡಬೇಕಾಗಿಲ್ಲ ಎಂಬುದನ್ನು ವಾದಿಸಿದೆ ಮತ್ತು ಪ್ರಯೊಗದಲ್ಲಿ ಯಕ್ಷಗಾನದ ಮಾತು, ಕುಣಿತ ಬಣ್ಣ, ಸಂಗೀತಗಳನ್ನು ಹಾಗೆಯೇ ಉಳಿಸಿಕೊಂಡು ಅದನ್ನು ಹ್ರಸ್ವಗೊಳಿಸಿದೆ. ಮಾತನ್ನು ಕಡಿಮೆಗೊಳಿಸಿ ಕುಣಿತವನ್ನು ಹೆಚ್ಚುಮಾಡಿ, ಬಣ್ಣವನ್ನು ಹಾಗೆಯೇ ಉಳಿಸಿದ ಆ ಪ್ರಯೋಗಗಳು ಯಶಸ್ವಿಯಾದವು.

ಇಂತಹ ಪ್ರಯತ್ನಗಳ ಮುಂದುವರಿಕೆಯಾಗಿ ಹಿಂದಿಯಲ್ಲಿ ಯಕ್ಷಗಾನ ಪ್ರದರ್ಶನಗಳನ್ನು ಪ್ರದರ್ಶಿಸುವ ಒಂದು ಮಹಾನ್ ಪ್ರಯತ್ನ ಇತ್ತೀಚಿನ ದಿನಗಳಲ್ಲಿ ನಡೆದುದನ್ನು ನಾವು ಮರೆಯಬಾರದು. ಶ್ರೀಮತಿ ವಿದ್ಯಾ ಕೋಳ್ಯೂರು ನೇತೃತ್ವದ ಯಕ್ಷಮಂಜೂಷವು ಹಿಂದಿಯಲ್ಲಿ ಯಕ್ಷಗಾನವನ್ನು ಪ್ರದರ್ಶಿಸುವ ಸಾಹಸಕ್ಕೆ ಮುಂದಾದುದು 2005ರಲ್ಲಿ. ಅವರ ಸಾಹಸಕ್ಕೆ, ಹೆಗಲು ಕೊಟ್ಟು ನಿಂತವರು ದೆಹಲಿ ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನದ ನಿರ್ದೇಶಕರಲ್ಲಿ ಒಬ್ಬರಾದ ಸರವು ಕೃಷ್ಣ ಭಟ್ಟರವರು. ಇಬ್ಬರೂ ಸ್ವತಹ ಯಕ್ಷಗಾನ ಕಲಾವಿದರೇ ಆಗಿರುವುದರಿಂದ ಯಕ್ಷಗಾನದ ಬಗ್ಗೆ ಇವರು ಮಾಡಿದ ಪ್ರಯೋಗಗಳನ್ನು ನಾವು ಅಧಿಕೃತವೆಂದು ಪರಿಗಣಿಸಬೇಕಾದ ಅಗತ್ಯವಿದೆ. 2005ರಲ್ಲಿ ಉತ್ತರ ಭಾರತದಾದ್ಯಂತ ಸುಮಾರು 18 ಯಕ್ಷಗಾನ ಕಾರ್ಯಕ್ರಮಗಳನ್ನು ನೀಡಿದ ಯಕ್ಷಮಂಜೂಷವು 2010ರಲ್ಲಿ ಸುಮಾರು 52 ಪ್ರದರ್ಶನಗಳನ್ನು ನೀಡಿದೆ. ಈ ನಡುವಣ 5 ವರ್ಷಗಳ ಅವಧಿಯಲ್ಲಿ ಒಟ್ಟು ಸುಮಾರು ಉತ್ತರ ಭಾರತದಾದ್ಯಂತ 200ಕ್ಕೂ ಹೆಚ್ಚಿನ ಪ್ರದರ್ಶನಗಳನ್ನು ಹಿಂದಿಯಲ್ಲಿ ನೀಡಲಾಗಿದೆ ಮತ್ತು ಈ ಪ್ರದರ್ಶನಗಳು ಹಿಂದಿ ಭಾಷಿಕರಿಗೆ ಇಷ್ಟವಾಗದೇ ಹೋಗಿದ್ದರೆ, ಇಷ್ಟೊಂದು ಸಂಖ್ಯೆಯಲ್ಲಿ ಇವು ಪ್ರದರ್ಶಿತಗೊಳ್ಳುತ್ತಿರಲಿಲ್ಲ ಎಂಬ ಅಂಶವನ್ನು ನಾವು ಮರೆಯಬಾರದು. ಇವರ ಈ ಪ್ರಯೋಗ–ಪ್ರದರ್ಶನಗಳಿಗೆ ಉತ್ತರ ಭಾರತದ ಅನೇಕ ಸಂಘ ಸಂಸ್ಥೆಗಳು, ಬ್ಯಾಂಕ್‌ಗಳು ಸಹಾಯಕ್ಕೆ ನಿಂತಿರುವುದನ್ನು ನಾವು ನೆನೆಸಿಕೊಳ್ಳಬಹುದು.

ಉತ್ತರ ಭಾರತದ ಹಿಂದೀ ಭಾಷಿಕರು, ಯಕ್ಷಗಾನಕ್ಕೆ ಹೊರತಾಗಿರುವವರು ನಿಜ. ಆದರೆ, ಯಕ್ಷಗಾನದ ಮೂಲಕ ಪ್ರತೀತಗೊಳ್ಳುವ ಪುರಾಣ ಕಥೆಗಳಿಗೆ ಹೊರತಾದವರಲ್ಲ. ಯಕ್ಷಗಾನವು ಆತುಕೊಂಡಿರುವ ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣ ಮತ್ತಿತರ ಕಥೆಗಳು ಎಲ್ಲರಿಗೂ ತಿಳಿದದ್ದೆ. ಅಲ್ಪ–ಸ್ವಲ್ಪ ಪ್ರಾದೇಶಿಕ ವ್ಯತ್ಯಾಸಗಳಿದ್ದಾಗ್ಯೂ, ಸ್ಥೂಲ ರೂಪದಲ್ಲಿ ಪ್ರತಿಯೊಬ್ಬ ಭಾರತೀಯನೂ ಈ ಕಥೆಗಳನ್ನು ಅರ್ಥಮಾಡಿಕೊಳ್ಳಬಲ್ಲ. ಇದನ್ನು ಅರ್ಥಮಾಡಿಕೊಂಡಿರುವ ವಿದ್ಯಾಕೋಳ್ಯೂರು ಮತ್ತು ಸರವು ಕೃಷ್ಣ ಭಟ್ಟರವರು ಮೊದಲಿಗೆ ಆಯ್ದ ಪ್ರಸಂಗಗಳನ್ನು ಸಂಕ್ಷಿಪ್ತವಾಗಿ ಹಿಂದಿಗೆ ಭಾಷಾಂತಿಸಿದರು. ಹೀಗೆ ಭಾಷಾಂತರಗೊಂಡ ಪ್ರಮುಖ ಪ್ರಸಂಗಗಳೆಂದರೆ 2005 ಪಂಚವಟಿ (ಅನುವಾದ: ಸರ್ಪಂಗಳ ಈಶ್ವರ ಭಟ್), ನರಕಾಸುರ ಮೋಕ್ಷ (ಅನುವಾದ: ಸುಣ್ಣಂಬಳ ಈಶ್ವರ ಭಟ್), 2006ರಲ್ಲಿ ಶಾಂಭವಿ ವಿಜಯ (ಅನುವಾದ: ಡಾ. ಎಂ. ಪ್ರಭಾಕರ ಜೋಶಿ), ಭೀಷ್ಮ ಪ್ರತಿಜ್ಞೆ (ಅನುವಾದ: ಸರ್ಪಂಗಳ ಈಶ್ವರ ಭಟ್) , 2008ರಲ್ಲಿ ಮಾ ಮಹಿಷಮರ್ಧಿನಿ (ಅನುವಾದ: ಕೆ ರಘುನಾಥ ರೈ), 2009ರಲ್ಲಿ ಭಸ್ಮಾಸುರ ಮೋಹಿನಿ (ಅನುವಾದ : ಸರ್ಪಂಗಳ ಈಶ್ವರ ಭಟ್), 2010ರಲ್ಲಿ ವಿಶ್ವಾಮಿತ್ರ ಮೇನಕೆ (ಅನುವಾದ: ಸರ್ಪಂಗಳ ಈಶ್ವರ ಭಟ್) ಸಿದ್ಧಪಡಿಸಲಾಯಿತು. ಹೀಗೆ ಅನುವಾದವನ್ನು ಸಿದ್ಧಪಡಿಸಲಾದ ಪದ್ಯಗಳನ್ನು ಹಾಗೆಯೇ ಉಳಿಸಿಕೊಳ್ಳಲಾಯಿತು ಮತ್ತು ಸುಮಾರು ಒಂದೂವರೆ ಗಂಟೆ ಪ್ರದರ್ಶನಕ್ಕೆ ಅನುಗುಣವಾಗಿ ಪದ್ಯಗಳ ಸಂಖ್ಯೆಯನ್ನು ಕಡಿಮೆಗೊಳಿಸಲಾಯಿತು. ಹಿಂದಿ ಭಾಷೆ, ಯಕ್ಷಗಾನದ ಕಲಾವಿದರಿಗೆ ಹೊಸತಾಗಿರುವುದರಿಂದ ಸಂವಾದವನ್ನು ನಿಶ್ಚಿತಗೊಳಿಸಲಾಯಿತು. (ಆದರೂ ಪ್ರಯೋಗಗಳ ಸಂಖ್ಯೆ ಹೆಚ್ಚಾದಂತೆ ಕಲಾವಿದರು ಸ್ವಯಂ ಇಚ್ಛೆಯಿಂದ ವಾಕ್ಯಗಳನ್ನು ಸೇರಿಸಲು ಆರಂಭಿಸಿದರು). ಅನಂತರ ಶಿಸ್ತು ಬದ್ಧ ಪ್ರಯೋಗಗಳು ಸಾಧ್ಯವಾಗುವ ಹಾಗೆ ಅಭ್ಯಾಸ ನಡೆಸಲಾಯಿತು. ಬಣ್ಣ ಮತ್ತು ನೃತ್ಯವನ್ನು ಹಾಗೆಯೇ ಉಳಿಸಿಕೊಳ್ಳಲಾಯಿತು.

ಈ ಹೊಸ ಪ್ರಯೋಗದ ಮೊದಲ ಪ್ರದರ್ಶನ ನಡೆದದ್ದು 2005ರ ಅಕ್ಟೋಬರ 8ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ. ಕನ್ನಡ ಮತ್ತು ಹಿಂದಿ ಎರಡೂ ಭಾಷೆಗಳು ಗೊತ್ತಿರುವ ಆ ದಿನದ ಪ್ರೇಕ್ಷರಿಗೆ ಪಂಚವಟಿ ಪ್ರಸಂಗ ಇಷ್ಟವಾಯಿತು. ಶ್ರೀ ಪುತ್ತಿಗೆ ರಘುರಾಮಹೊಳ್ಳರ ಭಾಗವತಿಕೆ, ಪದ್ಯಾಣ ಶಂಕರ ನಾರಾಯಣ ಭಟ್ಟರ ಚೆಂಡೆ, ಪಿ ಟಿ ಜಯರಾಮ ಭಟ್ಟರ ಮದ್ದಳೆ, ದೀಪಕ್ ಪೇಜಾವರ ಅವರ ರಾಮ, ಜಗದಾಭಿರಾಮ ಅವರ ಘೋರಶೂರ್ಪನಖಿ, ವಿದ್ಯಾಕೋಳ್ಯೂರರ ಮಾಯಾ ಶೂರ್ಪನಖಿ, ಕಾರ್ತಿಕ್ ಕೋರ್ಡೆಲ್ ಅವರ ಲಕ್ಷ್ಮಣ, ಸುಜಯಾ ಪದ್ಯಾಣ, ಅಕ್ಷರ ಪದ್ಯಾಣ, ರವಿಶಂಕರ ಭಟ್ಟರ ಮುನಿಗಳು ರಂಗದ ಮೇಲೆ ಹಿಂದಿ ಭಾಷೆಯಲ್ಲಿ ಪಂಚವಟಿಯನ್ನು ಮರುಸೃಷ್ಟಿಸಿದ್ದವು.

ಈ ಯಶಸ್ಸಿನಿಂದ ಉತ್ತೇಜಿತರಾದ ಸಂಘಟಕರು ಮುಂದಿನ 5 ವರ್ಷಗಳಲ್ಲಿ ದೇಶದ 17 ರಾಜ್ಯಗಳಲ್ಲಿ ಹಿಂದಿ ಯಕ್ಷಗಾನವನ್ನು ಅಭೂತ ಪೂರ್ವವಾಗಿ ಪ್ರದರ್ಶಿಸಿದರು. ರೋಹತಕ್, ಭಿವಾನಿ, ಕರ್ನಾಲ್, ಫರೀದಾಬಾದ್, ಗುರುಗಾಂವ್, ದೆಹಲಿ, ಆಗ್ರಾ, ಮಥುರಾ, ಲಖ್ನೋ, ಅಯೋಧ್ಯೆ, ಭೋಪಾಲ್, ಇಂದೋರ್, ಚಂಡೀಗಢ, ಅಮೃತಸರ, ಫಿರೋಜ್‌ಪುರ್, ಜಮ್ಮು–ಕಾಶ್ಮೀರ, ರಿಯಾಸಿ, ಸೋಲನ್, ಹರಿದ್ವಾರ, ಪಾಲಂಪುರ್, ಪುಣೆ, ಮುಂಬೈ, ಹೈದರಾಬಾದ್, ವಲ್ಸದ್, ಸೂರತ್, ಅಹಮದಾಬಾದ, ವಡೋದರ, ಜಯಪುರ, ಅಲ್ವರ್, ಕೋಟಾ, ಚಿತ್ತೋರ್‌ಗಢ್, ಉದಯಪುರ, ಕೊಲ್ಕತ್ತ, ಹೂಗ್ಲಿ, ಚೆನ್ನೈ, ತ್ರಿಶೂರ್, ಬೆಂಗಳೂರು, ಮೈಸೂರು, ಬೆಳಗಾಂ, ಮಂಗಳೂರು, ಮೂಡಬಿದಿರೆ, ಉಡುಪಿ, ಧರಮ್‌ಶಾಲಾ, ನಡೋನಾ ಮುಂತಾದ ಪ್ರದೇಶಗಳಲ್ಲಿ ಲಕ್ಷಾಂತರ ಮಂದಿ ಯಕ್ಷಗಾನವನ್ನು ವೀಕ್ಷಿಸಿದರು. ದೇಶದ ಪ್ರತಿಷ್ಠಿತ ಸಂಸ್ಥೆಗಳಾದ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯ, ದೆಹಲಿ ವಿಶ್ವವಿದ್ಯಾಲಯ, ಪಾಲಂಪುರ ಕೃಷಿ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಇಂದಿರಾಗಾಂಧಿ ರಾಷ್ಟ್ರೀಯ ಕಲಾಶಾಲೆ, ಸಿಸಿಆರ್‌ಟಿ, ಭಾರತ್ ಭವನ ಭೋಪಾಲ್, ಭಾರತೀಯ ಭಾಷಾ ಪರಿಷತ್ ಕೊಲ್ಕತ್ತ, ಪೂರ್ವವಲಯ ಸಾಂಸ್ಕೃತಿಕ ಕೇಂದ್ರ, ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಹೊಸದೆಹಲಿ, ಕೃಷ್ಣ ಮೂರ್ತಿ ಫೌಂಡೇಶನ್, ವಾರಣಾಸಿ, ವೈಜಿಪಿ ಚೆನ್ನೈ, ಮೀನಾಕ್ಷಿ ಇಂಜಿನಿಯರಿಂಗ್ ಕಾಲೇಜ್, ಹರಿದ್ವಾರ ಇಂಜಿನಿಯರಿಂಗ್ ಕಾಲೇಜ್, ಅಗರ್‌ವಾಲ್ ಇನ್‌ಸ್ಟಿಟ್ಯೂಟ್ ಜಯಪುರ, ರವೀಂದ್ರ ಭಾರತಿ ವಿಶ್ವವಿದ್ಯಾನಿಲಯ ಕೊಲ್ಕತ್ತ, ಸ್ಪಿಕ್‌ಮೆಕೆಯ ಮೂಲಕ ಹತ್ತಾರು ಶಾಲಾ ಕಾಲೇಜುಗಳು ಮೊದಲಾದ ಸಂಸ್ಥೆಗಳು ಈ ಯಕ್ಷಗಾನವನ್ನು ಆಯೋಜಿಸಲು ಸಂತೋಷದಿಂದ ಮುಂದೆ ಬಂದವು.

ಈ ಪ್ರದರ್ಶನಗಳಲ್ಲಿ, ಕೆಲವು ಪ್ರದರ್ಶನಗಳು ವಿಶೇಷ ಉಲ್ಲೇಖಕ್ಕೆ ಅರ್ಹವಾಗಿವೆ. ಒಂದು ಎಂದರೆ, ಭಾರತೀಯ ಭೂಸೇನೆ ಮತ್ತು ವಾಯುಸೇನೆಯ ಸೈನಿಕರು ಮತ್ತು ಅವರ ಕುಟುಂಬದವರಿಗಾಗಿ ಜಮ್ಮು ಕಾಶ್ಮೀರ, ಫಿರೋಜ್‌ಪುರ್, ಆಗ್ರಾ, ಬೆಂಗಳೂರು, ಬೆಳಗಾಂ, ರಿಯಾಸಿ ಮುಂತಾದೆಡೆಗಳಲ್ಲಿ ನಡೆಸಿದ ಪ್ರದರ್ಶಗಳು. ಈ ಪ್ರದರ್ಶನಗಳಲ್ಲಿ ಕಲಾವಿದರು ಸೇನೆಯ ದಕ್ಷತೆ ಮತ್ತು ಶಿಸ್ತಿಗೆ ಹೊಂದಿಕೊಳ್ಳಲೇ ಬೇಕಾಗಿತ್ತು. ಇದ್ದಕ್ಕಿದ್ದ ಹಾಗೆ ರಂಗಭೂಮಿಯ ನಿರ್ಮಾಣ, ಶೌಚಾಲಯಗಳ

ನಿರ್ಮಾಣ, ಪ್ರೇಕ್ಷಕರ ಆಗಮನ ಮೊದಲಾದವುಗಳೆಲ್ಲ ಕಲಾವಿದರಿಗೆ ಹೊಸ ಅನುಭವ ನೀಡಿದ್ದು ಸುಳ್ಳಲ್ಲ. ಅತ್ಯಂತ ಶಿಸ್ತಿನಿಂದ ಯಕ್ಷಗಾನ ನೋಡಿದ ಈ ಸೈನಿಕರು ಪ್ರದರ್ಶನದ ಕೊನೆಯಲ್ಲಿ ತಾವು ಸೈನಿಕರು ಎಂಬುದನ್ನು ಮರೆತು ತಮ್ಮ ಸಂತೋಷವನ್ನು ವ್ಯಕ್ತ ಪಡಿಸಿದ್ದು ಕೂಡಾ ವಿಶೇಷವಾದುದು. ಈ ತರದ ಪ್ರದರ್ಶನಗಳನ್ನು ನಾವು ಇದುವರೆಗೆ ಕಂಡೇ ಇಲ್ಲ ಎಂಬ ಉದ್ಗಾರ ಸಹಜವಾಗಿತ್ತು. ಇದೇ ರೀತಿಯ ಇನ್ನೊಂದು ವಿಶೇಷ ಅನುಭವ ಎಂದರೆ ಹಡಿಗಿನ ಮೇಲೆ ನೀಡಿದ ಪ್ರದರ್ಶನ. ಕೊಲ್ಕತ್ತಾದಲ್ಲಿ ಗಂಗಾನದಿಯ ಮೇಲೆ, ನಿಲ್ಲಿಸಲಾದ ವಿಶೇಷ ಹಡಗಿನ ಮೂರನೆಯ ಅಂತಸ್ತಿನಲ್ಲಿ, ಅಲ್ಲಿನ ಉದ್ದಿಮೆದಾರರಿಗಾಗಿ ಪ್ರದರ್ಶನ ಏರ್ಪಡಿಲಾಗಿತ್ತು. ಸುತ್ತೆಲ್ಲ ನೀರು ಕಾಣಿಸಿಕೊಳ್ಳುತ್ತಿದ್ದ ನವೀನ ಬಗೆಯ ವಾತಾವರಣದಲ್ಲಿ ಕಲಾವಿದರು ನೀಡಿದ ಪ್ರದರ್ಶನ ರೋಮಾಂಚಕಾರಿಯಾಗಿತ್ತು. ಇಂತಹ ಅನೇಕ ಅನುಭವಗಳನ್ನು ಹೊತ್ತುಕೊಂಡು ವರ್ಷದಿಂದ ವರ್ಷಕ್ಕೆ ಪರಿಣಾಮಕಾರಿಯಾಗಿ ಪ್ರದರ್ಶನಗಳನ್ನು ನೀಡುತ್ತ ಬಂದ ಯಕ್ಷಮಂಜೂಷವು 2010ರಲ್ಲಿ ಒಟ್ಟು 52 ಪ್ರದರ್ಶನಗಳನ್ನು ನೀಡಿತು. 2010ರ ಪ್ರದರ್ಶನಗಳನ್ನು ಮುಖ್ಯವಾಗಿ ಪ್ರಾಯೋಜಿಸಿದವರೆಂದರರೆ, ಬ್ಯಾಂಕ್ ಆಫ್ ಮಹಾರಾಷ್ಟ್ರ, ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್, ಬ್ಯಾಂಕ್ ಆಫ್ ಇಂಡಿಯಾ, ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಕರ್ನಾಟಕ ಬ್ಯಾಂಕ್. ಪ್ರಸ್ತುತ ವರ್ಷ ದೆಹಲಿ, ಹರಿಯಾಣ, ಉತ್ತರ ಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ, ಪಶ್ಚಿಮಬಂಗಾಳ, ಹಿಮಾಚಲ ಪ್ರದೇಶ, ಪಂಜಾಬ್, ಉತ್ತರಾಖಂಡ, ಕರ್ನಾಟಕ, ತಮಿಳುನಾಡು, ಗುಜರಾತುಗಳಲ್ಲಿ ಹಿಂದೀ ಯಕ್ಷಗಾನ ಪ್ರದರ್ಶನ ನಡೆಯಿತು. ಈ ಬಾರಿ ಆಯ್ದುಕೊಂಡ ಪ್ರಸಂಗಗಳೆಂದರೆ ಭಸ್ಮಾಸುರ ಮೋಹಿನಿ ಮತ್ತು ಪಂಚವಟಿ. ಹಿಮ್ಮೇಳದಲ್ಲಿ ಯುವ ಭಾಗವತರಾದ ಕಕ್ಯೆಪದವು ಗಿರೀಶ್ ರೈ, ಮದ್ದಳೆಯಲ್ಲಿ ಪಿ ಟಿ ಜಯರಾಂ, ಚೆಂಡೆಯಲ್ಲಿ ದೇವೀಪ್ರಸಾದ ಕಟೀಲ್, ಲೋಕೇಶ್ ಕಟೀಲ್, ಮಿಜಾರು ದಯಾನಂದ ಮತ್ತು ಮುಮ್ಮೇಳದಲ್ಲಿ ರಾಧಾಕೃಷ್ಣ ನಾವಡ ಮಧೂರು, ಜಗದಾಭಿರಾಮ ಪಡುಬಿದ್ರಿ, ವಿದ್ಯಾ ಕೋಳ್ಯೂರು, ಹರಿನಾರಾಯಣ ಭಟ್ ಎಡನೀರು, ಲಕ್ಷ್ಮಣ ಕುಮಾರ ಮರಕಡ, ಪ್ರಶಾಂತ ಶೆಟ್ಟಿ, ಮೋಹನ ಬೆಳ್ಳಿಪ್ಪಾಡಿ, ದೀಪಕ್ ರಾವ್ ಪೇಜಾವರ, ಉಜಿರೆ ನಾರಾಯಣ, ವೆಂಕಟೇಶ್, ವಿಶ್ವನಾಥ, ಮೋನಪ್ಪ ಸಹಕರಿಸಿದ್ದಾರೆ. ಭಸ್ಮಾಸುರನ ಜನನ, ಮೋಹಿನಿ ಪ್ರವೇಶ, ಭಸ್ಮಾಸುರ ಮೋಹಿನಿಯರ ನೃತ್ಯ ಭಾಗ ಪ್ರೇಕ್ಷಕರ ಮನಸೂರೆಗೊಂಡಿತು. ಹಿಂದಿ ಯಕ್ಷಗಾನ ಪ್ರದರ್ಶನಗಳು ಉತ್ತರಭಾರತದಾದ್ಯಂತ ಮಾಧ್ಯಮಗಳ ಗಮನವನ್ನು ವಿಶೇಷವಾಗಿ ಸೆಳೆದಿದ್ದವು ಎಂಬುದು ಕೂಡ ಉಲ್ಲೇಖಾರ್ಹ. ಅದರಲ್ಲೂ ವಿಶೇಷವಾಗಿ ಹಿಂದಿ ಪತ್ರಿಕೆಗಳಾದ, ದೈನಿಕ ಜಾಗರಣ್, ದೈನಿಕ್ ಭಾಸ್ಕರ್, ಅಮರ್ ಉಜಾಲಾ, ಪಂಜಾಬ್ ಕೇಸರಿ ಮೊದಲಾದ ಪತ್ರಿಕೆಗಳು ಘೋರಶೂರ್ಪನಖಿ, ಮೋಹಿನಿ, ಭಸ್ಮಾಸುರ, ರಾಮ, ಲಕ್ಷ್ಮಣ, ಸೀತೆ ಮುಂತಾದ ವೇಷಗಳ ಭಾವಚಿತ್ರಗಳನ್ನು ಮುಖಪುಟದಲ್ಲಿ ವರ್ಣರಂಜಿತವಾಗಿ ಪ್ರಕಟಿಸಿದ್ದಲ್ಲದೆ ಕಾರ್ಯಕ್ರಮದ ವಿಶೇಷ ವರದಿಯನ್ನು ನೀಡಿದವು. ರಾಷ್ಟ್ರೀಯ ಇಂಗ್ಲಿಷ್ ಪತ್ರಿಕೆಗಳಾದ ಹಿಂದೂ, ಇಂಡಿಯನ್ ಎಕ್ಸ್‌ಪ್ರೆಸ್, ಟೈಮ್ಸ್ ಆಫ್ ಇಂಡಿಯಾ ಕೂಡ ಹಿಂದೀ ಯಕ್ಷಗಾನಕ್ಕೆ ವಿಶೇಷ ಪ್ರಚಾರ ನೀಡಿವೆ. ಈ ವರದಿಗಳನ್ನು ನೋಡಿದ ಓದುಗರು ದೊಡ್ಡ ಸಂಖ್ಯೆಯಲ್ಲಿ ಹಿಂದೀ ಯಕ್ಷಗಾನ ನೋಡಲು ಸೇರಿದ್ದರೆಂಬುದು ವಿಶೇಷವಾದ ಸಂಗತಿ. ಪ್ರದರ್ಶನದ ವಿಮರ್ಶೆ, ಕಲಾವಿದರ ಸಂದರ್ಶನ, ಮಾತ್ರವಲ್ಲದೆ ತಿರುಪತಿಯ ಟಿಟಿಡಿ ಚ್ಯಾನೆಲ್ ಮೂಲಕ ದೇಶ–ವಿದೇಶಗಳಿಗೆ ನೇರ ಪ್ರಸಾರಗಳಾಗಿವೆ. ಉತ್ತರ ಭಾರತದ ರೇಡಿಯೋ ಮತ್ತು ಟಿವಿ ಮಾಧ್ಯಮಗಳಲ್ಲಿ ಯಕ್ಷಗಾನ ಪ್ರಸಾರಗೊಂಡದ್ದು ಯಕ್ಷಗಾನದ ಹಿರಿಮೆ–ಗರಿಮೆಯನ್ನು ದೇಶದಾದ್ಯಂತ ವಿಸ್ತರಿಸುವಲ್ಲಿ ಯಶಸ್ವಿಯಾಗಿದೆ.

ಹೀಗೆ ಹಿಂದಿ ಯಕ್ಷಗಾನವು ನಮ್ಮ ಕಾಲದಲ್ಲಿ ನಡೆದ ಒಂದು ದೊಡ್ಡ ಘಟನೆ. ಅದು, ಯಕ್ಷಗಾನವನ್ನು ಒಂದು ರಾಷ್ಟ್ರವ್ಯಾಪಿ ಕಲೆ ಎಂದು ಬಿಂಬಿಸುವಲ್ಲಿ ಯಶಸ್ವಿಯಾಗಿದೆ.

❑ **ಡಾ. ಪುರುಷೋತ್ತಮ ಬಿಳಿಮಲೆ.**

# ಪ್ರಶಂಸೆ ಪಡೆದ ಮೇಘ, ಧ್ರುವಿ ಭಟ್ ಭರತನಾಟ್ಯ



ಕರ್ನಾಟಕದಿಂದ ದೆಹಲಿಗೆ ಬಂದು ವಾಸವಾಗಿರುವ ಕನ್ನಡಿಗರಲ್ಲಿ ಅನೇಕರು ತಮ್ಮ ಮಕ್ಕಳಿಗೆ ಕರ್ನಾಟಕದ ಕಲೆ, ಸಂಸ್ಕೃತಿಯ ಅಭಿರುಚಿಯನ್ನು ಬೆಳೆಸುತ್ತಿರುವುದು ಒಂದು ಉತ್ತಮ ಬೆಳವಣಿಗೆ. ಸುಪ್ರಸಿದ್ಧ ಬಿ.ವಿ. ಕಾರಂತರ ಮೊಮ್ಮಗಳಾದ ಶ್ರೀಮತಿ ಸವಿತಾ ಮತ್ತು ನಾರಾಯಣ ಭಟ್ ದಂಪತಿ ತಮ್ಮ ಮಕ್ಕಳಾದ ಮೇಘ ಮತ್ತು ಧ್ರುವಿ ಅವರಿಗೆ ದಿಲ್ಲಿಯ ಪ್ರಖ್ಯಾತ ನೃತ್ಯ ಗುರು ಶ್ರೀಮತಿ ಉಷಾ ರಾವ್ ಅವರಿಂದ ಕಳೆದ 6 ವರ್ಷಗಳಿಂದ ಭರತನಾಟ್ಯ ತರಬೇತಿ ಕೊಡುತ್ತಿದ್ದಾರೆ. ನವೆಂಬರ್ 14ರಂದು ದಿಲ್ಲಿಯ ತ್ರಿವೇಣಿ ಕಲಾ ಸಭಾಂಗಣದಲ್ಲಿ ಕುಮಾರಿ ಮೇಘ ಮತ್ತು ಧ್ರುವಿ ಭಟ್ ಭರತನಾಟ್ಯ ಆರ್‍ರಂಗೇಟ್ರಂ ಕಾರ್ಯಕ್ರಮ ಕಿಕ್ಕಿರಿದ ಪ್ರೇಕ್ಷಕರ ಸಮ್ಮುಖದಲ್ಲಿ ನಡೆದು ಮೇಘಾ, ಧ್ರುವಿ ಕಲಾ ರಸಿಕರಿಂದ ಮೆಚ್ಚುಗೆ ಪಡೆದುಕೊಂಡರು.

ಗಣೇಶ ವಂದನ ನೃತ್ಯದೊಂದಿಗೆ ಆರಂಭಗೊಂಡ ಭರತನಾಟ್ಯ ಮಿಶ್ರ ತ್ರಿಪುಟ ತಾಳದ ಗಂಭೀರ ನಾಟೈ ರಾಗದ ಮಲ್ಲಾರಿ ನೃತ್ಯದಲ್ಲಿ ಮೇಘ ಮತ್ತು ಧ್ರುವಿ ಪ್ರೇಕ್ಷಕರನ್ನು ತಮ್ಮತ್ತ ಸೆಳೆಯುವಲ್ಲಿ ಸಫಲರಾದರು. ಆತಿ ಸ್ವರಂ, ಅಮ್ಮೈ ಉಡಾನ್, ವರ್ಣಂ ನೃತ್ಯಗಳಲ್ಲಿ ಮೇಘ, ಧ್ರುವಿ ತಮ್ಮ ಗುರುಗಳಿಂದ ಸಾಕಷ್ಟು ತರಬೇತಿ ಪಡೆದುಕೊಂಡದ್ದನ್ನು ಸ್ಪಷ್ಟಪಡಿಸಿದರು.

ವಿರಾಮದ ನಂತರ ಮೇಘಾ ನೀಡಿದ ಮಾಧವೇ ಮಾಗುರು ನೃತ್ಯ ಮಧುವಂತಿ ರಾಗ, ಆದಿತಾಳದಲ್ಲಿ ಮನ ಸೆಳೆಯಿತು. ಕಲ್ಯಾಣಿ ರಾಗ, ಆದಿತಾಳದ ದಶಾವತಾರ ನೃತ್ಯದಲ್ಲಂತೂ ಮೇಘ ಪ್ರೌಢ ಕಲಾವಿದೆಯಾಗಿ ನೃತ್ಯಾಭಿನಯ ನೀಡಿದ್ದು ಪ್ರೇಕ್ಷಕರಿಂದ ವಿಶೇಷ ಪ್ರಶಂಸೆ ಪಡೆಯುವಂತಾಯಿತು.

ಹಂಸನಂದಿ ರಾಗದ, ಮಿಶ್ರಛಾಪು ತಾಳದ ಶ್ರೀರಾಮಚಂದ್ರ ಕೃಪಾಳು ನೃತ್ಯದಲ್ಲಿ ಧ್ರುವಿ ಮಂದಸ್ಮಿತೆಯಾಗಿ ಚಿತ್ತಾಕರ್ಷಿಸಿದಳು. ಪುರಂದರ ದಾಸರ ಕೃಷ್ಣಾ ಬಾರೋ ಹಾಡು ಆದಿತಾಳದಲ್ಲಿದ್ದು ಮೋಹನ ರಾಗದಲ್ಲಿ ಧ್ರುವಿ ಯಶೋಧೆಯಾಗಿ ಮನೋಜ್ಞ ಅಭಿನಯದಲ್ಲಿ ಪ್ರಭಾವ ಬೀರಿದಳು.

ತಿಲ್ಲಾನ ನೃತ್ಯದಲ್ಲಿ ಮೇಘ ಮತ್ತು ಧ್ರುವಿ ದಣಿವರಿಯದೆ ನರ್ತಿಸಿ ಭರತನಾಟ್ಯ ಆರ್‍ರಂಗೇಟ್ರಂ ಕಾರ್ಯಕ್ರಮಕ್ಕೆ ವಿಶೇಷ ಮೆರುಗನ್ನಿತ್ತರು.

ಗುರು ಶ್ರೀಮತಿ ಉಷಾ ರಾವ್ ನಟುವಾಂಗದಲ್ಲಿ ಎಸ್. ಸೂರ್ಯನಾರಾಯಣನ್ ಹಾಡುಗಾರಿಕೆಯಲ್ಲಿ, ಎಸ್. ಶಂಕರ್ ಮೃದಂಗದಲ್ಲಿ, ವಿ.ಎಸ್. ಚಕ್ರಪಾಣಿ ವಯೋಲಿನ್‌ನಲ್ಲಿ, ಜಿ. ರಘುರಾಮನ್ ವೇಣುವಾದನದಲ್ಲಿ ಭಾಗವಹಿಸಿ ನೃತ್ಯ ಕಾರ್ಯಕ್ರಮ ಯಶಸ್ವಿಯಾಗಿಸುವಲ್ಲಿ ಕಾರಣರಾದರು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ಸರ್ಕಾರದ ದಿಲ್ಲಿಯ ವಿಶೇಷ ಪ್ರತಿನಿಧಿ ಶ್ರೀ ವಿ. ಧನಂಜಯ ಕುಮಾರ್ ಅವರು ಮೇಘ ಮತ್ತು ಧ್ರುವಿ ಅವರನ್ನು ಸನ್ಮಾನಿಸಿ ಇವರ ನೃತ್ಯ ನೋಡಿ ಭರತನಾಟ್ಯಕ್ಕೆ ತಾನು ಮಾರುಹೋಗಿರುವೆನೆಂದು ಹೇಳಿದರಲ್ಲದೆ ಕರ್ನಾಟಕ ಸರ್ಕಾರವು ದಿಲ್ಲಿಯಲ್ಲಿ ಏರ್ಪಡಿಸುವ ಕಾರ್ಯಕ್ರಮಗಳಲ್ಲಿ ಇವರಿಗೆ ಅವಕಾಶ ನೀಡಲಾಗುವುದೆಂದರು. “ದೆಹಲಿ ಕನ್ನಡಿಗ” ಪತ್ರಿಕೆಯ ಸಂಪಾದಕ ಬಾ. ಸಾಮಗ ಅವರು ಉಡುಪಿ ಸಹೋದರಿಯರಾದ ಮೇಘ ಮತ್ತು ಧ್ರುವಿ ಭಟ್ ಭಾರತದ ಅಗ್ರಗಣ್ಯ ನೃತ್ಯಗಾರ್ತಿಯರಾಗಿ ಕೀರ್ತಿ ಪಡೆಯಲಿ ಎಂದು ಹಾರೈಸಿದರಲ್ಲದೆ ಕರ್ನಾಟಕ ಸರ್ಕಾರ ಹೊರನಾಡಿನಲ್ಲಿರುವ ಕರ್ನಾಟಕ ನೃತ್ಯಗಾರ್ತಿಯರಿಗೆ ಬೆಂಬಲ ನೀಡಬೇಕೆಂದರು. ಶ್ರೀಮತಿ ಉಷಾ ರಾವ್ ತಮ್ಮ ಶಿಷ್ಯೆಯರ ನೃತ್ಯದಿಂದ ಮನ ತಣಿದಿದೆ ಎಂದರಲ್ಲದೆ ಅವರಿಗೆ ಸನ್ಮಾನ ಪತ್ರ ನೀಡಿದರು. ಶ್ರೀಮತಿ ಸವಿತಾ ಮತ್ತು ನಾರಾಯಣ ಭಟ್ ಅವರು ಅತಿಥಿಗಳೆಲ್ಲರನ್ನು ಅಭಿನಂದಿಸಿದರು.

❑ ಬಾ. ಸಾಮಗ

# ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಸಂಭ್ರಮದ 30ನೇ ವಾರ್ಷಿಕೋತ್ಸವ

ಡಿಸೆಂಬರ್ 5 ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನಿಗೆ ಅತ್ಯಂತ ಮಹತ್ವಪೂರ್ಣವಾದ ದಿನ. ಎಲ್ಲೆಲ್ಲೂ ಹಬ್ಬದ ವಾತಾವರಣ. ಬಣ್ಣಬಣ್ಣದ ಸೀರೆಗಳನ್ನುಟ್ಟು ಸಂಭ್ರಮದಿಂದ ನಡೆದಾಡುವ ಹೆಂಗಳೆಯರು ಕಿಕ್ಕಿರಿದ ಸಭಾಂಗಣ, ತಳಿರು ತೋರಣಗಳಿಂದ ಅಲಂಕೃತವಾದ ಮುಖ್ಯದ್ವಾರ, ರಂಗಸಭೆಗೆ ಹೂವಿನ ರಂಗೋಲೆ, 30ನೇ ವಾರ್ಷಿಕೋತ್ಸವಕ್ಕೆ ಸ್ವಾಗತ ಕೋರುತ್ತಿತ್ತು.

ಅರಸಿನ, ಕುಂಕುಮ ಹೂಗಳನ್ನಿತ್ತು ಮುಖ್ಯ ಅತಿಥಿಗಳನ್ನು ಆದರಿಸಿ ಸ್ವಾಗತಿಸಲಾಯಿತು. ಅಧ್ಯಕ್ಷೆ ಶ್ರೀಮತಿ ರಂಗಮಣಿ ರಾವ್, ಕಾರ್ಯದರ್ಶಿ ಶ್ರೀಮತಿ ಸುಷ್ಮಾ ಭಿಡೆ, ಖಜಾಂಚಿ ಶ್ರೀಮತಿ ರಾಧಾ ಕೌಜಲಗಿ, ಶ್ರೀಮತಿ ರಾಧಿಕಾ ರಾವ್, ಉಪಾಧ್ಯಕ್ಷೆ ಶ್ರೀಮತಿ ಸುಮಿತ್ರಾ ರಾವ್, ಸಹ ಕಾರ್ಯದರ್ಶಿನಿ ಶ್ರೀಮತಿ ಎನ್. ಅರುಣಾ ಹಾಗು ಸದಸ್ಯೆಯರು ಅತಿಥಿಗಳನ್ನು ಸ್ವಾಗತಿಸಿ ಸಭೆಗೆ ಕರೆದೊಯ್ದರು.

ಶ್ರೀಮತಿ ಜಲಜಾ ಮತ್ತು ಸಂಗಡಿಗರಿಂದ ಸುಶ್ರಾವ್ಯವಾದ 'ಹರಸು ಬಾ' ಪ್ರಾರ್ಥನೆಯ ಬಳಿಕ ಅತಿಥಿಗಳನ್ನು ಸ್ವಾಗತಿಸಲಾಯಿತು. ನಂತರ ದೀಪ ಬೆಳಗುವುದರೊಂದಿಗೆ ಕಾರ್ಯಕ್ರಮದ ಉದ್ಘಾಟನೆ ಮಾಡಿದವರು ಶ್ರೀಮತಿ ಗೀತಾಚಂದ್ರನ್‌ರವರು. ಸದಸ್ಯೆಯರು ಮುಖ್ಯ ಅತಿಥಿಗಳಿಗೆ ಹೂಗುಚ್ಛ ಮತ್ತು ಸ್ಮರಣಿಕೆ ಕೊಟ್ಟು ಅಭಿನಂದಿಸಿದರು. ಶ್ರೀಮತಿ ಗೀತಾ ಚಂದ್ರನ್‌ರವರು ತಮ್ಮ ಭಾಷಣದಲ್ಲಿ ಸ್ನೇಹಾಕ್ಕೆ ಶುಭ ಕೋರುತ್ತ ಒಂದು ಹಾಡನ್ನೂ ಹಾಡಿ ಜನರ ಮನರಂಜಿಸಿದರು.

ಮುಖ್ಯ ಅತಿಥಿಯಾಗಿ ಬಂದ ಕನ್ನಡದ ಪ್ರಬುದ್ಧ ಕಲಾವಿದೆ ಶ್ರೀಮತಿ ಗಿರಿಜಾ ಲೋಕೇಶ್ ಅವರು ತಮ್ಮ ಭಾಷಣದಲ್ಲಿ ತನ್ನ ಮಾತಿನ ವೈಖರಿಯ ನಟನೆಯಿಂದ ಜನರನ್ನು ನಕ್ಕು ನಲಿಸಿದರು. ಆಮೇಲೆ ನಮ್ಮ ಸ್ಮರಣ ಸಂಚಿಕೆಯನ್ನು ಶ್ರೀಮತಿ ತಾರಾ ಅಪ್ಪಚ್ಚು ಶರ್ಮ, ನಿರ್ದೇಶಕಿ ಇಂಟರ್‌ನೇಶನ್ ಎನ್.ಜಿ.ಒ. ಅವರು ತಮ್ಮ ಅಮೃತ ಹಸ್ತದಿಂದ ಬಿಡುಗಡೆ ಮಾಡಿದರು. ಅವರು ತಮ್ಮ ಭಾಷಣದಲ್ಲಿ 'ಮಹಿಳೆ'ಯ ಸ್ಥಾನಮಾನಗಳ ಬಗ್ಗೆ ತಿಳಿ ಹೇಳಿದರು. ಮತ್ತು




ಸ್ನೇಹಾ ಅಸೋಸಿಯೇಶನ್‌ನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಮಗೆ ಕೆಲಸ ಮಾಡಲು ಮಾರ್ಗದರ್ಶನ ನೀಡುತ್ತೇನೆ ಎಂದರು.

ತದನಂತರ ನಮ್ಮ ಅಧ್ಯಕ್ಷೆ ಶ್ರೀಮತಿ ರಂಗಮಣಿ ರಾವ್‌ರವರು ನಮ್ಮ ಸ್ನೇಹಾದ ಚಟುವಟಿಕೆಗಳ ಬಗ್ಗೆ ಸುಂದರವಾಗಿ ಸ್ಫುಟವಾಗಿ ಮಾತನಾಡಿದರು. ಈ ಸಮಾರಂಭದಲ್ಲಿ ಹಿರಿಯ ಕನ್ನಡತಿ, ನಮ್ಮ ಹಿರಿಯ ಸದಸ್ಯೆ, ಕನ್ನಡಕ್ಕಾಗಿ ಹೋರಾಡಿ ದೆಹಲಿಯಲ್ಲಿ ಅರ್ಧ ಶತಕದಿಂದಲೂ ಹೆಚ್ಚಿಗೆ ವಾಸವಾಗಿದ್ದುಕೊಂಡು ನಮಗೆ ಬೆನ್ನೆಲುಬಾಗಿರುವ ಶ್ರೀಮತಿ ಸಾವಿತ್ರಿ ಶಾಸ್ತ್ರಿಯವರನ್ನು ಹಾಗೂ



**ಈಗ ನಂದೊಂದು ಸಣ್ಣ ವರದಿ 'ಸ್ನೇಹ' ಬಗ್ಗೆ**

ರೀ ನಮಗೊಂದು ಸುದ್ದಿ ಗೊತ್ತ, ಸ್ನೇಹಾ ಲೇಡಿಸ್ ಅಸೋಸಿಯೇಶನ್‌ನವರು 30ನೇ ವಾರ್ಷಿಕೋತ್ಸವವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ದಿನಾಂಕ 5ನೇ ಡಿಸೆಂಬರದಂದು ಏರ್ಪಡಿಸಿದ್ದರು ಕಣ್ರೀ. ಮನೀ ಕೆಲಸ ಎಲ್ಲ ಬಿಟ್ಟು ನೋಡೋಣ ಅಂಥ ಹೋಗಿದ್ದೆ ತುಂಬಾ ಚಂದಾತು ಕಣ್ರಿ. ಹೋಗುವಾಗ ಇನ್ನೇನು ಬರೀ ಹೆಂಗಸರು ಇನ್ನೇನು ಮಾಡ್ಯಾರು ಮಹಾ ಅಂದಕೊಂಡಿದ್ದೆ. ಅಲ್ಲಿ ಹೋಗಿ ಕೂತು ನೋಡ್ತೀನಿ ಶ್ರೀಮತಿ ಜಲಜಾ ರಾಜು ಅವರು ತಮ್ಮ ಶಿಷ್ಯರೊಂದಿಗೆ ಸೇರಿ ಹಳೆ ಸಿನಿಮಾ ಹಾಡುಗಳನ್ನು ಹಾಡಿದರು ಕಣ್ರಿ. ಭೋ ಪಸಂದಾಗಿತ್ರಿ. ಪ್ರೆಸಿಡೆಂಟ್ ರಂಗಮಣಿ ರಾವ್ ಅವರು ನೀವೆಲ್ಲ ಬಂದದ್ದು ನಮಗೆಲ್ಲ ಖುಷಿ ಕೊಟ್ಟಿತು ಅಂದು ಹೂಗುಚ್ಛ ಕೊಟ್ಟಗಂಡ್ರು. ಪದ್ಮಶ್ರೀ ಗೀತಾ ಚಂದ್ರನ್ ಅವರು ಅಧ್ಯಕ್ಷತೆ ವಹಿಸಿದ್ರು ಕಣ್ರಿ. ಗಿರಿಜಾ ಲೋಕೇಶ್, ತಾರಾ ಶರ್ಮಾ, ಸುಧಾ ಬರಗೂರು, ಇಂದುಮತಿ ಸಾಲೀಮಠ ಇವರೆಲ್ಲ ದೀಪ ಬೆಳಗಿಸಿ, ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ್ರು ಕಣ್ರಿ.

ಆಮೇಲೆ ಬೈಕೆರೆ ನಾಗೇಶ, ಚಿನ್ನದ ಓಟದ ಹುಡುಗಿ ಅಶ್ವಿನಿ ಶೆಟ್ಟಿ, ಸಾವಿತ್ರಿ ಅವರಿಗೆ ಶಾಲು ಹೊದಿಸಿ ಸನ್ಮಾನ ಮಾಡಿದ್ರು. ಇಷ್ಟಲ್ಲದ ಚೆನ್ನಾಗಿ ಓದಿದ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಟ್ರುರಿ. ಅವರೆಲ್ಲರ ನಡುವೆ ಕರ್ನಾಟಕ ಸಂಘದ ಪ್ರಭಾರಿ ಅಧ್ಯಕ್ಷ ವಸಂತ ಶೆಟ್ಟಿಯವರು ಹೆಂಗಸ ಬಾಯಿಗೆ ಹೆದರಿಕೊಂಡೋ ಏನೋ ಚುಟುಕಾಗಿ ಮಾತಾಡಿ ಕೂತುಕೊಂಡ್ರು ಕಣ್ರಿ.

ಇದಾದ ಮ್ಯಾಲೆ, ಅಷ್ಟಲಕ್ಷ್ಮೀ ವೈಭವನಾ ಡಾನ್ಸುನಲ್ಲೆ ತೋರಿಸಿದ್ರು ಕಣ್ರಿ. ಆಮ್ಯಾಲೆ ಬಂದ ಸುಧಾ ಬರಗೂರು, ಇಂದುಮತಿ ಸಾಲಿಮಠ ಇಬ್ರುನೂ ಹೊಟ್ಟೆ ತುಂಬೋಷ್ಟು ನಗಿಸಿಬಿಟ್ರು ಕಣ್ರಿ. ಕೃಷ್ಣೇ ಗೌಡರ ಸುಪ್ರಭಾತಾನ ಸಾಲಿಮಠರು, ಏನ್ ಚಂದ ಹೇಳಿದ್ರು ಕಣ್ರಿ.

ಆಮೇಲೆ ಸ್ನೇಹದ ಚಿಕ್ಕವರು, ದೊಡ್ಡವರು ಸೇರುಕೊಂಡು ಒಂದು ನಾಟಕ ಮಾಡಿದ್ರು ಕಣ್ರಿ. ನಾಟಕದ ಹೆಸರು ಏನು ಗೊತ್ತ "ಗಂಡಿಗಾಗಿ ಗುದ್ದಾಟ"ಅದ್ರಾಗ ಅಹಲ್ಯಾ ಚಿಂತಾಮಣಿ, ರಾಧಾ ಕೌಜಲಗಿ, ಸರೋಜ ಮಾಧವ, ರಾಧಿಕಾ, ಆಶಾ ಶ್ಯಾಮಸುಂದರ್ ಇದಲ್ಲದೆ ಇನ್ನೂ ಕೆಲವರು ಇದ್ರು ಕಣ್ರಿ. ಹೇ! ನಾಟಕದ ಬಹಳ ಛಲೋ ಬಂತರಿ ಕಣ್ರಿ. ಅವರಿಗೆ ನಾಟಕ ಹೇಳಿಕೊಟ್ಟವರು ಮೈಲಾರಪ್ಪ ಅಂತರೀ. . . ಈ ಎಲ್ಲಾ ಕಾರ್ಯಕ್ರಮ ನಡೆಸಿದೋರ್ರು ಆ ನಮ್ಮ ಉಷಾಕ್ಕ ಕಣ್ರಿ. ಆಮೇಲೆ ಬಿಸಿ ಬೇಳೆ ಭಾತು, ಮೊಸರನ್ನ, ವಡಾ ನನ್ನ ಫೇವರೆಟ್ ಊಟ ಕಣ್ರಿ. ಬಹಳ ದಿವಸದ ಮ್ಯಾಲೆ ಸಿಕ್ತಿತ್ರ್ಯಾ. ತಿಂದೆ ಮನೆಗೆ ಬಂದೆ. ಇಷ್ಟ...

❑ **ಜಮುನಾ ಸಿ. ಮಠದ**

ಹಿರಿಯ ಅಧಿಕಾರಿ 'ಜನಸೇವೇಯೇ ಜನಾರ್ದನ ಸೇವೆ' ಎಂದು ಕೆಲಸ ಮಾಡುವ ಶ್ರೀ ಬೈಕೆರೆ ನಾಗೇಶ್ ಅವರನ್ನು ಮುಖ್ಯ ಅತಿಥಿಗಳಿಂದ ಶಾಲು ಹೊದಿಸಿ ಸ್ಮರಣಿಕೆಯನ್ನು ನೀಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ದೆಹಲಿ ಕನ್ನಡ ಶಾಲೆಯಲ್ಲಿ 12ನೇ ತರಗತಿಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಹಿಮಾಶ್ಯು ಮತ್ತು ವಾಣಿ ಕನೋಜಿಯ ಅವರಿಗೆ ಬಹುಮಾನದ ಮೊತ್ತವನ್ನು ನೀಡಿ ಪ್ರೋತ್ಸಾಹಿಸಲಾಯಿತು. ದೆಹಲಿಯ ನಮ್ಮ ಕನ್ನಡ ಶಾಲೆಯ ಪ್ರತಿಭಾವಂತ ಹಳೆ ವಿದ್ಯಾರ್ಥಿ ಶ್ರೀ ನರೇಂದ್ರ ಶರ್ಮ ಅವರಿಗೆ ಬಹುಮಾನದ ಮೊತ್ತ ಮತ್ತು ಶಾಲು ಹೊದಿಸಿ ಸನ್ಮಾನಿಸಲಾಯಿತು ಹಾಗೂ ಏಷಿಯನ್ ಗೇಮ್ಸ್ ಮತ್ತು ಕೊಮನ್ ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗಳಿಸಿದ ನಮ್ಮ ಕನ್ನಡದ ಹುಡುಗಿ ಕುಮಾರಿ ಅಶ್ವಿನಿ ಅಕ್ಕುಂಜೆ ಅವರಿಗೆ ಹೂಗುಚ್ಛ ಹಾಗೂ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ನಂತರ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಜನಪ್ರಿಯ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ನಮ್ಮ ಸ್ನೇಹಾದ ಬಗ್ಗೆ, ಮಹಿಳೆಯರ ಸಾಧನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಮ್ಮ ಸ್ನೇಹಾದ ಸಮಾಜ ಸೇವೆಯ ಅಂಗವಾಗಿ ಆರ್.ಕೆ.ಪುರಂ ನಲ್ಲಿರುವ ಅಂಧ ವಿದ್ಯಾಲಯ ಹಾಗೂ ಗುರ್‌ಗಾಂವ್‌ನಲ್ಲಿರುವ ಚಕ್ರಪುರದ ಸೇವಾ ಭಾರತಿಗೆ ಕಿರುಕಾಣಿಕೆ ನೀಡಲಾಯಿತು.

ಸಭಾ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಮೊದಲನೆಯದಾಗಿ ಕುಮಾರಿ ಶ್ರುತಿರಾವ್ ಅವರಿಂದ 'ಗಣಪತಿ ವಂದನೆ' ಎಲ್ಲರ ಮೆಚ್ಚುಗೆ ಪಡೆಯಿತು. ನಂತರ ನಮ್ಮ ಸದಸ್ಯೆಯರು ಮೂರು ದಶಕಗಳ ಚಲನಚಿತ್ರ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ಎಲ್ಲರ ಮನರಂಜಿಸಿದರು. ನಂತರ ಸದಸ್ಯೆಯರು ಅಷ್ಟಲಕ್ಷ್ಮಿಯ ನೃತ್ಯರೂಪಕವನ್ನು ಶ್ರೀಮತಿ ಶಾಲಿನಿ ಪ್ರಶಾಂತ್ ಅವರ ನೇತೃತ್ವದಲ್ಲಿ ಎಲ್ಲರ ಜನರನ್ನು ಬೆರಗುಗೊಳಿಸಿದರು.

ಕಾರ್ಯಕ್ರಮದ ಮುಖ್ಯ ಆಕರ್ಷಣೆ ಎಂದರೆ 'ನಗೆ ಹಬ್ಬ' ಇದನ್ನು ನಡೆಸಲು ಬೆಂಗಳೂರಿನಿಂದ ಬಂದಂತಹ ಶ್ರೀಮತಿ ಸುಧಾ ಬರಗೂರು ಹಾಗೂ ಗುಲ್ಬರ್ಗಾದಿಂದ ಬಂದಂತಹ ಶ್ರೀಮತಿ ಇಂದುಮತಿ ಸಾಲೀಮಠರವರು ತಮ್ಮ ಸುಂದರ ಹಾಸ್ಯ ಕಲೆಯಿಂದ ಜನರನ್ನು ನಕ್ಕು ನಲಿಸಿದರು. ಅವರ ಹಾಸ್ಯ ರಂಜನೆ ಇನ್ನು ಇನ್ನೂ ನೋಡಿ ಕೇಳಬೇಕೆನಿಸುತ್ತಿತ್ತು.

ಕೊನೆಯದಾಗಿ ನಮ್ಮ ಸದಸ್ಯೆಯರಿಂದ, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಟಿ.ಎಂ. ಮೈಲಾರಪ್ಪ ಅವರ ನಿರ್ದೇಶನದ 'ಗಂಡಿಗಾಗಿ ಗುದ್ದಾಟ' ನಾಟಕದ ಪ್ರದರ್ಶನ ನಡೆಯಿತು. ನಾಟಕವನ್ನು ಚೆನ್ನಾಗಿ ಅಭಿನಯಿಸಿದ ನಮ್ಮ ಸ್ನೇಹಾ ಸ್ನೇಹಿತೆಯರು ತಡವಾದರೂ ಜನರ ಮನ ಗೆದ್ದರು. ಹಾಗೂ ಸದಸ್ಯೆಯರಿಗೆ ನಡೆದ ಸ್ಪರ್ಧೆಗಳ ಬಹುಮಾನ ವಿತರಣೆಯನ್ನು ಶ್ರೀಮತಿ ಸುಧಾ ಬರಗೂರು ಹಾಗೂ ಶ್ರೀಮತಿ ಇಂದುಮತಿ ಸಾಲೀಮಠರವರು ನಡೆಸಿಕೊಟ್ಟರು. ನಂತರ ಶ್ರೀ ನಾಗೇಶ್‌ರವರಿಂದ ಲಕ್ಕೀ ಡಿಪ್ ಡ್ರಾವನ್ನು ನಡೆಸಲಾಯಿತು. ಹೀಗೆ ಒಟ್ಟಾಗಿ ನಮ್ಮ ಸ್ನೇಹಾದ ಉತ್ಸವವು ನಗು, ಹಾಡು, ಹಾಸ್ಯ ಹಾಗೂ ನೃತ್ಯಗಳಿಂದ ಜನರ ಮನರಂಜಿಸಿತು.

ಕಾರ್ಯಕ್ರಮದ ಕೊನೆಯಲ್ಲಿ ಸವಿಸವಿಯಾದ ಭೋಜನವನ್ನು ಎಲ್ಲರೂ ಸಂಯಮದಿಂದ ಕಾದು ಉಂಡು ತೇಗಿದರು. ಈ ಎಲ್ಲಾ ಕಾರ್ಯಕ್ರಮವನ್ನು ತನ್ನ ಸವಿಮಾತುಗಳಿಂದ ಉತ್ತಮ ನಿರ್ವಹಣೆಯೊಂದಿಗೆ ಶ್ರೀಮತಿ ಉಷಾ ಭರತಾದ್ರಿ ಹಾಗೂ ಶ್ರೀಮತಿ ಎನ್. ಅರುಣಾ ಅವರು ಪ್ರೀತಿಯಿಂದ ನಡೆಸಿಕೊಟ್ಟರು. ಕಾರ್ಯದರ್ಶಿ ಶ್ರೀಮತಿ ಸುಷ್ಮಾ ಭಿಡೆಯವರು ವಂದನಾರ್ಪಣೆಯನ್ನು ಸುಂದರವಾಗಿ ನಡೆಸಿಕೊಟ್ಟರು.

**❑ ಸುಷ್ಮಾ ಭಿಡೆ, ಕಾರ್ಯದರ್ಶಿ**

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವಾರ್ಷಿಕ ಕ್ರೀಡೋತ್ಸವ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವಾರ್ಷಿಕ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡುತ್ತಿರುವ ದೆಹಲಿಯ ಕರ್ನಾಟಕ ಸರ್ಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿ ಶ್ರೀ ಬೈಕೆರೆ ನಾಗೇಶ್

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯು ದಿನಾಂಕ 04.12.2010 ರಂದು ಶಾಲೆಯ ಆವರಣದಲ್ಲಿ ಮುಸುಕಿನ ಮಂಜಿನ ಚಳಿಯಲ್ಲಿ ಶಾಲೆಯ ವಾರ್ಷಿಕ ಕ್ರೀಡೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ದೆಹಲಿಯ ಹೆಚ್ಚುವರಿ ಪ್ರತಿನಿಧಿಗಳಾದಂತಹ ಶ್ರೀ ಬೈಕೆರೆ ನಾಗೇಶ್ ಹಾಗೂ ಅಧ್ಯಕ್ಷರಾದಂತಹ ಶ್ರೀ ಜಿ.ಎಂ. ಲಿಂಗರಾಜು, ಉಪಾಧ್ಯಕ್ಷರಾದ ಶ್ರೀ ಕೆ.ಈಶ್ವರ ಭಟ್, ಕಾರ್ಯದರ್ಶಿ ಶ್ರೀ ಅಂಜನಿ ಗೌಡ, ಖಜಾಂಚಿಗಳಾದ ಶ್ರೀ ಬಸವರಾಜ ಎಸ್. ಮೇಟಿ ಹಾಗು ಕ್ರೀಡಾ ಸಮಿತಿಯ ಸಂಚಾಲಕರಾದ ಶ್ರೀನಾಥ್ ಹಾಗೂ ಸದಸ್ಯರುಗಳಾದ ಬಿ.ಕೆ. ಬಸವರಾಜ, ಶಕುಂತಲಾ ನಾಯಕ್, ಕಾರ್ಯವಾಹಿ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಹಾಗೂ ಎಲ್ಲಾ ಉಪಾಧ್ಯಾಯರುಗಳು ಶಾಲೆಯ ಮಕ್ಕಳಿಗೆ ಹುರಿದುಂಬಿಸಿ, ಶುಭ ಹಾರೈಸಿ ಆಟೋಟ ಸ್ಪರ್ಧೆಗಳನ್ನು ಪ್ರಾರಂಭಿಸಲಾಯಿತು. ಮಕ್ಕಳಿಂದ ವಿವಿಧ ರೀತಿಯ ಕವಾಯಿತು ಕಂಡಂತಹ ಮುಖ್ಯ ಅತಿಥಿಗಳು ಹೊಗಳಿದರು. ಹಾಗೂ ಆಶೀರ್ವದಿಸಿ, ಸರ್ಕಾರದಿಂದ ಶಾಲೆಗೆ ಒಂದು ಬಸ್ಸನ್ನು ಕೊಡಿಸುವ ಬಗ್ಗೆ ಆಶ್ವಾಸನೆ ನೀಡಿದರು. ಅಲ್ಲದೆ ಸರ್ಕಾರದ ವತಿಯಿಂದ ಕನ್ನಡ ಶಾಲೆಗೆ ಹಾಗೂ ಸುವರ್ಣ ಮಹೋತ್ಸವಕ್ಕೂ ಸಹ ತಮ್ಮ ಸಹಯೋಗವಿದೆ ಎಂದು ತಿಳಿಸಿದರು. ಸುಮಾರಾಗಿ 2 ಗಂಟೆಯ ಮಧ್ಯಾಹ್ನದವರೆಗೆ ಕ್ರೀಡೆಗಳು ಮುಗಿದ ನಂತರ ಬಹುಮಾನ ವಿತರಣೆಯ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಹಾಗೂ ಎಂ.ಸಿ.ಎ. ನಿರ್ದೇಶಕರಾದ ಶ್ರೀ ಕೆ. ಶ್ರೀಧರ್ ಶಾಲೆಯ ವ್ಯವಸ್ಥಾಪಕರಾದ ಡಾ.ಎಂ. ಎಸ್.ಶಶಿಕುಮಾರ್ ಹಾಗೂ ಶಾಲೆಯ ಎಲ್ಲಾ ಪದಾಧಿಕಾರಿಗಳಿಂದ ಮಕ್ಕಳಿಗೆ ಬಹುಮಾನ ವಿತರಿಸಿದರು.

**❑ ಶ್ರೀನಾಥ್ ಎನ್.ಆರ್.**

# ಖಜುರಾಹೋ ಪ್ರವಾಸ ಕಥನ



ಭಾರತದ ಶಿಲ್ಪ ಕೇಂದ್ರಗಳಲ್ಲಿ ಖಜುರಾಹೋಗೆ ಅದರದೇ ಆದ ಮಹತ್ವದ ಸ್ಥಾನವಿದೆ. ದೇಶವಿದೇಶದ ಪ್ರವಾಸಿಗರು ನೋಡಬೇಕು ಎಂದು ಕನಸು ಕಾಣುತ್ತಿರುವ ಸ್ಥಳಗಳಲ್ಲಿ ಇದೊಂದು. ಖಜುರಾಹೋ ಎಂದೊಡನೆ ಪ್ರವಾಸಿಗರು ಅಲ್ಲಿನ ದೇವಾಲಯಗಳಲ್ಲಿ ಅಲಂಕರಿಸಿರುವ ಪ್ರಣಯ ಶಿಲ್ಪಗಳನ್ನು, ಪ್ರಣಯಕೇಳಿಯಲ್ಲಿ ತೊಡಗಿರುವ ಮಿಥುನ ಶಿಲ್ಪಗಳನ್ನು ಕಾಣಬೇಕೆಂದು ಹಂಬಲಿಸುತ್ತಾರೆ. ಕಾಮುವನ್ನು ಅನುಭವಿಸದೇ ಅದರ ಕುರಿತು ಆಲೋಚಿಸುವ ಹದಿಹರೆಯದವರಂತೆ ಪ್ರವಾಸಿಗರೂ ಖಜುರಾಹೋವನ್ನು ನೋಡಲು ಕಾತುರರಾಗಿರುತ್ತಾರೆ. ಕಲ್ಲುಕಲ್ಲುಗಳಲ್ಲೂ ಪ್ರೇಮಗೀತೆ ಕೇಳಿ ಬರುವ ಪ್ರಣಯ ಕಾವ್ಯದ ಉಗಮಸ್ಥಾನವಾದ ಖಜುರಾಹೋ ಶೃಂಗಾರಮಯ ಶಿಲ್ಪಗಳಿಗೆ ಹೆಸರುವಾಸಿಯಾಗಿದೆ.

ವಾರಾಂತ್ಯದ ಎರಡು ದಿನಗಳ ರಜೆಯನ್ನು ಕಳೆಯಲು ನಾವು ಈ ಬಾರಿ ಖಜುರಾಹೋಗೆ ಹೋಗಬೇಕೆಂದು ನಿರ್ಧರಿಸಿದೆವು. ಬಹಳಷ್ಟು ದಿನಗಳಿಂದ ಖಜುರಾಹೋಗೆ ಪ್ರವಾಸ ಹೋಗಬೇಕೆಂಬುದು ನಮ್ಮ ಆಶಯವಾಗಿತ್ತು. ದೆಹಲಿಯಿಂದ ಖಜುರಾಹೋ ಸುಮಾರು ಆರು ನೂರು ಕಿಲೋ ಮೀಟರ್ ದೂರವಿದೆ. ಝಾನ್ಸಿಯಿಂದ ಖಜುರಾಹೋಗೆ ರಸ್ತೆ ಅಷ್ಟೊಂದು ಚೆನ್ನಾಗಿಲ್ಲ ಎಂಬ ಕಾರಣದಿಂದ ನಾವು ರೈಲು ಪ್ರಯಾಣವನ್ನು ಅವಲಂಬಿಸಿದೆವು.

ದೆಹಲಿಯ ನಿಜಾಮುದ್ದಿನ್ ರೈಲ್ವೇ ನಿಲ್ದಾಣದಿಂದ ಶುಕ್ರವಾರದ ಸಂಜೆ ಹೊರಡುವ ಯು.ಪಿ. ಸಂಪರ್ಕ್‌ಕ್ರಾಂತಿ ಎಕ್ಸ್‌ಪ್ರೆಸ್ ರೈಲಿನಲ್ಲಿ ತತ್ಕಾಲ್ ಸೇವೆಯ ಮೂಲಕ ನಮ್ಮ ಟಿಕೇಟುಗಳನ್ನು ಖರೀದಿಸಿಯಾಗಿತ್ತು. ಅದು ಉತ್ತರಪ್ರದೇಶದ ಮಾಣಿಕ್‌ಪುರ್ ಗೆ ಹೋಗುವ ರೈಲಾಗಿತ್ತು. ನಮ್ಮ ಸೀಟುಗಳು ಎಸಿ ತ್ರಿಟಯರ್ ಕೋಚ್ ಬಿ ಎರಡು. ರೈಲ್ವೇ ನಿಲ್ದಾಣಕ್ಕೆ ತಲುಪಿದ ನಾವು ಗಾಡಿಗಾಗಿ ಕಾದೆವು. ಗಾಡಿ ಬಂತು. ಗಾಡಿಯ ಎಂಜಿನ್‌ನಿಂದ ಎ ಒಂದು, ಎ ಎರಡು, ಬಿ ಒಂದು ಕೋಚ್‌ಗಳಿದ್ದರೂ ಬಿ ಎರಡು ಕೋಚ್ ಸಿಗದೆ ನಾವು ಗಾಬರಿಯಾದೆವು. ಬಿ ಎರಡು ಕೋಚ್ ಗಾಡಿಯ ಕೊನೆಯ ಭಾಗದಲ್ಲಿದೆ ಎಂದು ಗೊತ್ತಾಗಿ ಅಲ್ಲಿಗೆ ಹೋದೆವು. ಅದು ನೇರವಾಗಿ ಖಜುರಾಹೋಗೆ ಹೋಗುವ ಡಬ್ಬಿಯಾಗಿತ್ತು. ಮಹೋಬಾ ರೈಲು ನಿಲ್ದಾಣದ ನಂತರ ಕೆಲವು ಕೋಚ್ ಖಜುರಾಹೋಗೆ ಹೋದರೆ ಇನ್ನೊಂದು ಭಾಗ ಮಾಣಿಕ್‌ಪುರ್‌ಗೆ ಹೋಗುವುದು.

ಹಿಂದಿನ ದಿನದಿಂದಲೂ ಜ್ವರದಿಂದ ಬಳಲುತ್ತಿದ್ದ ನಾನು ಇನ್ನೂ ಚೇತರಿಸಿರಲಿಲ್ಲ. ರೈಲು ಗಾಡಿಯೊಳಗೆ ಕಂಬಳಿಹೊದ್ದು ಸುಮ್ಮನೆ ಕುಳಿತು ಕೊಂಡಿದ್ದೆ. ನಮ್ಮ ಸಹಪ್ರಯಾಣಿಕರು ಫ್ರಾನ್ಸ್‌ನವರಾಗಿದ್ದರು. ಎರಡು ಮಕ್ಕಳು, ಗಂಡ ಹೆಂಡತಿಯರ ಕುಟುಂಬ ಅದಾಗಿತ್ತು. ನಿರರ್ಗಳ ಫ್ರೆಂಚ್ ಭಾಷೆಯಲ್ಲಿ ಮಾತಾಡುತ್ತಿದ್ದ ಅವರ ಮಾತುಗಳೇನಾದರು ಅರ್ಥವಾಗುತ್ತಿದೆಯೇ ಎಂದು ನನ್ನ ಹಿರಿಯ ಮಗ ಚಿನುಗೆ ಕೇಳಿದೆ. ಆತ ಶಾಲೆಯಲ್ಲಿ ಈ ವರ್ಷದಿಂದ ಫ್ರೆಂಚ್ ಕಲಿಯುತ್ತಿದ್ದಾನೆ. ಅವನಿಗೂ ಅರ್ಥವಾಗುತ್ತಿರಲಿಲ್ಲ. ಅವರು ನಮ್ಮನ್ನೂ ಸೇರಿಸಿ ಗಾಡಿಯೊಳಗೆ ಅವರ ಫೊಟೋಗಳನ್ನು ಕ್ಲಿಕ್ಕಿಸುತ್ತಿದ್ದರು. ರಾತ್ರಿಯೂಟಕ್ಕೆ ಅವರು ಬ್ರೆಡ್ ತಿಂದು ನೀರು ಕುಡಿದರು. ನಾವೂ ನಮ್ಮೊಂದಿಗೆ ತಂದಿದ್ದ ಪೂರಿ ತಿಂದೆವು. ಎಲ್ಲರೂ ಬೇಗನೆ ನಿದ್ದೆ ಮಾಡಲು ತಯಾರಾದೆವು.

ಮುಂಜಾನೆಯ ಹೊತ್ತಿಗೆ ನಮಗೆ ಎಚ್ಚರವಾದಾಗ ನಾವು ಮಹೋಬ ರೈಲು ನಿಲ್ದಾಣದಲ್ಲಿದ್ದೆವು. ಅಲ್ಲಿಂದ ಖಜುರಾಹೋಗೆ ಸುಮಾರು ಒಂದು ಗಂಟೆಯ ಪ್ರಯಾಣ. ಇಬ್ಬನಿಯಿಂದ ತೋಯ್ದ ಗಿಡಮರಗಳು ಬೆಳಗಿನ ಬಿಸಿಲಿಗೆ ಹೊಳೆಯುತ್ತಿದ್ದವು. ಖಜುರಾಹೋ ನಿಲ್ದಾಣ ಹೊಸದಾಗಿತ್ತು. ಅಲ್ಲದೇ ಮಾಮೂಲಿ ನಿಲ್ದಾಣಗಳಂತೆ ಬಹಳ ಜನಜಂಗುಳಿಯಿರಲಿಲ್ಲ. ಎಲ್ಲರೂ ಆರಾಮವಾಗಿ ಇಳಿಯುತ್ತಿದ್ದೆವು. ವಿಶಾಲವಾದ ರೈಲ್ವೆ ನಿಲ್ದಾಣ ನಮ್ಮನ್ನು ಮಧ್ಯಪ್ರದೇಶದ ಈ ಹಳ್ಳಿ ಮೂಲೆಗೆ ಸ್ವಾಗತಿಸುತ್ತಿತ್ತು. ವಿಸ್ತಾರವಾದ ಪ್ರದೇಶವನ್ನು ರೈಲ್ವೇವಿಭಾಗವು ತನ್ನದಾಗಿಸಿ ಮುಂದೆ ಈ ನಿಲ್ದಾಣದ ವಿಸ್ತರಣೆಗೆ ಸಾಕಾಗುವಷ್ಟು ಜಾಗವಿದೆ.

ರೈಲ್ವೇ ನಿಲ್ದಾಣದಿಂದ ಹೊರಬಂದ ನಾವು ನಗರಕ್ಕೆ ಹೋಗಲು ಅಲ್ಲಿನ ರಿಕ್ಷಾವೊಂದನ್ನು ನಿಗದಿಪಡಿಸಿದೆವು. ಅದೇ ಆಟೋದವನು ನಮ್ಮನ್ನು ದೇವಾಲಯಗಳನ್ನೆಲ್ಲಾ ಸುತ್ತಾಡಿಸುವೆನೆಂದು ಹೇಳಿದ. ಸರಕಾರದಿಂದ ಅಂಗೀಕೃತ ದರಪಟ್ಟಿಯನ್ನೂ ನಮ್ಮ ಮುಂದಿಟ್ಟ. ನಗರದಲ್ಲಿ ನಮಗೆ ತಂಗಲು ಹೋಟೆಲೊಂದನ್ನು ಅವನ ಮೂಲಕವೇ ನಾವು ಹುಡುಕಲಾರಂಭಿಸಿದೆವು. ನಾವು ಹೋದ ದಿನ ಮಧ್ಯಪ್ರದೇಶದ ಮುಖ್ಯಮಂತ್ರಿಯವರು ಒಂದು ಸಮಾವೇಶಕ್ಕೆ ಖಜುರಾಹೋಗೆ ಆಗಮಿಸಿದ್ದರು. ಹಾಗಾಗಿ ಸಮಾವೇಶಕ್ಕೆ ಬಂದ ಜನಗಳಿಂದ ಹಾಗೂ ಪ್ರವಾಸಿಗರಿಂದ ಎಲ್ಲಾ ಹೋಟೆಲುಗಳು ತುಂಬಿದ್ದವು. ನಾವು ನೋಡಿದ ಕೆಲವು ಹೋಟೆಲುಗಳು ತಂಗಲು ಅರ್ಹವಾಗಿರಲಿಲ್ಲ. ಒಂದೆರಡು ಹೋಟೆಲುಗಳು ಚೆನ್ನಾಗಿದ್ದರೂ ಅವುಗಳಲ್ಲಿ ಖಾಲಿ ಕೋಣೆಗಳಿರಲಿಲ್ಲ. ಕೊನೆಗೆ ಹೋಟೆಲ್ ಲೇಕ್‌ವ್ಯೂನಲ್ಲಿ ನಾವು ತಂಗಿದೆವು.

ನಾವು ನಿಂತ ಹೋಟೆಲಿನಿಂದ ಹೊರಬಂದು ಬೆಳಗಿನ ಉಪಾಹಾರಕ್ಕೆ ಒಳ್ಳೆಯ ರೆಸ್ಟಾರೆಂಟ್ ಎಲ್ಲಾದರೂ ಇದೆಯಾ ಎಂದು ನೋಡುತ್ತಿದ್ದೆವು. ನಮ್ಮ ಹೋಟೆಲ್‌ನ ಪಕ್ಕದಲ್ಲಿದ್ದ ಸ್ಥಳೀಯರೊಬ್ಬರು ಅಲ್ಲೇ ಹತ್ತಿರವಿದ್ದ ಮದರಾಸು ಕಾಫೀ ಹೌಸ್ ಅನ್ನು ತೋರಿಸಿದರು. ಅಲ್ಲಿ ನಿಮಗೆ ಇಡ್ಲಿ, ದೋಸೆ ಸಿಗಬಹುದು ಎಂದು ಹೇಳಿದರು. ನಮ್ಮನ್ನು ನೋಡಿಯೇ ಅವರು ನಮ್ಮನ್ನು ದಕ್ಷಿಣ ಭಾರತೀಯರೆಂದು ಗುರುತಿಸಿರಬೇಕು. ದಿನಾ ತಿನ್ನುವ ದೋಸೆ ಇಡ್ಲಿಗಿಂತ ಇಲ್ಲೇ ಸ್ಥಳೀಯ ತಿಂಡಿಯೇನಾದರೂ ಸಿಗುವುದೇ ಎಂದು ನಾವು ಹುಡುಕ ಹೊರಟೆವು. ಅಂತಹ ರೆಸ್ಟಾರೆಂಟುಗಳ್ಯಾವುದೂ ನಮಗೆ ದೊರಕಲಿಲ್ಲ.

ಪಶ್ಚಿಮ ಗುಂಪಿನ ದೇವಾಲಯಗಳ ಎದುರೇ ಇದ್ದ ಹೋಟೆಲ್ ಸಿದ್ಧಾರ್ಥದ ಟೆಂಪಲ್ ವ್ಯೂ ಗೆ ಹೋದೆವು. ಅಲ್ಲಿ ಸ್ಥಳೀಯ ತಿಂಡಿಗಳಿಗಿಂತ ಅಲ್ಲಿದ್ದುದು ಕಾಂಟಿನೆಂಟಲ್ ತಿಂಡಿಗಳು. ನಾವೂ ಬ್ರೆಡ್ ಮತ್ತು ಮೊಟ್ಟೆಯನ್ನೇ ಆರ್ಡರ್ ಮಾಡಬೇಕಾಯಿತು. ಅಲ್ಲಿಯ ಸರ್ವರ್ ಗಳ ಸೇವೆ ನೋಡಿದಾಗ ನಮಗೆ ಬೆಳಗಿನ ಉಪಾಹಾರಕ್ಕೆ ಕನಿಷ್ಟ ಒಂದು ಗಂಟೆ ಹಿಡಿಯಬಹುದು ಎನಿಸಿತು. ನಾವು ಕುಳಿತು ಸುಮಾರು ಹತ್ತು ನಿಮಿಷಗಳ ನಂತರ ನಮ್ಮೆಡೆ ಆರ್ಡರ್ ತೆಗೆದುಕೊಳ್ಳಲು ಬಂದರು. ನಾವಾದರೋ ಆದಷ್ಟು ಬೇಗ ತಿಂಡಿ ಮುಗಿಸಿ ದೇವಾಲಯಗಳನ್ನು ಸುತ್ತುವ ಆತುರದಲ್ಲಿದ್ದೆವು. ರೆಸ್ಟಾರೆಂಟ್‌ನಲ್ಲಿ ತಿಂಡಿಗೆ



ಕಾಯುತ್ತಿದ್ದರೂ ಕಿಟಕಿಯ ಮೂಲಕ ನಮಗೆ ದೇವಾಲಯ ಸಮೂಹದ ನೋಟ ಲಭಿಸುತ್ತಿತ್ತು. ವಿದೇಶಿ ಪ್ರವಾಸಿಗರು ಮುಂಜಾನೆಯ ಎಳೆ ಬಿಸಿಲಿನಲ್ಲಿ ದೇವಾಲಯದ ದೃಶ್ಯಗಳನ್ನು ಕ್ಯಾಮಾರದಲ್ಲಿ ಸೆರೆ ಹಿಡಿಯುತ್ತಿದ್ದರು.

ಬಹಳ ಒತ್ತಾಯದ ನಂತರ ನಮ್ಮ ಟೇಬಲ್‌ಗೂ ತಿಂಡಿ ಬಂತು. ತಿಂಡಿ ತಿಂದು ನಾವು ಹೊರ ಬಂದು ಗೊತ್ತು ಪಡಿಸಿದ ಅಟೋರಿಕ್ಷಾ ಎಲ್ಲಿದೆಯೆಂದು ಹುಡುಕುವಷ್ಟರಲ್ಲಿ ಅಟೋದವ ನಮ್ಮ ಹತ್ತಿರ ಬಂದು ನಿಂತ. ತಾನು ಬರಲಾಗುತ್ತಿಲ್ಲ. ನನ್ನ ಅಕ್ಕನ ಮಗ ಬಿಮ್ಮೋ ನಿಮ್ಮನ್ನು ದೇವಾಲಯ ಸುತ್ತಿಸಿ ತರುತ್ತಾನೆ ಎಂದ. ಆತ ಸ್ಥಳೀಯನಾಗಿದ್ದುದರಿಂದ ನಾವೇನು ಚಿಂತಿಸದೆ ಒಪ್ಪಿಕೊಂಡೆವು.

ಮಧ್ಯಪ್ರದೇಶದ ವಿಶಾಲವಾಗಿ ಹರಡಿರುವ ಪ್ರದೇಶದ ನಡುವೆ ಇದೆ ಖಜುರಾಹೋ. ನಡುವೆ ಸಣ್ಣ ಹಳ್ಳಿಗಳು. ಹಳ್ಳಿಗಳಿಂದ ಸ್ವಲ್ಪ ದೂರದಲ್ಲಿಯೇ ಎತ್ತರಕ್ಕೆ ಎದ್ದು ನಿಂತ ದೇಗುಲಗಳು. ಖಜುರಾಹೋ ದೇವಾಲಯಗಳನ್ನು ಮುಖ್ಯವಾಗಿ ಅವುಗಳಿರುವ ಪ್ರದೇಶಕ್ಕನುಗುಣವಾಗಿ ದಕ್ಷಿಣ, ಪೂರ್ವ ಮತ್ತು ಪಶ್ಚಿಮದ ದೇವಾಲಯಗಳೆಂಬ ಗುಂಪುಗಳನ್ನು ಮಾಡಿದ್ದಾರೆ. ಖಜುರಾಹೋದಲ್ಲಿ ನಮ್ಮ ಪ್ರಯಾಣ ಮೊದಲು ಆರಂಭಗೊಂಡಿದ್ದು ದಕ್ಷಿಣ ಮತ್ತು ಪೂರ್ವ ಗುಂಪಿನ ದೇವಾಲಯಗಳನ್ನು ವೀಕ್ಷಿಸುವುದರೊಂದಿಗೆ. ದಕ್ಷಿಣ ಗುಂಪಿಗೆ ಸೇರಿದ ಚತುರ್ಭುಜ ದೇವಾಲಯವು ನಾವು ನೋಡಿದ ಮೊದಲ ದೇವಾಲಯವಾಗಿದ್ದುದರಿಂದ ಕುತೂಹಲ ಮತ್ತು ನಿರಾಶೆಗಳು ಒಟ್ಟಿಗೇ ಆಯಿತು. ಪಶ್ಚಿಮಾಭಿಮುಖವಾಗಿರುವ ಈ ವಿಷ್ಣು ದೇವಾಲಯದ ಗೋಡೆಗಳಲ್ಲಿ ಯಾವುದೇ ಮಿಥುನ ಶಿಲ್ಪಗಳಿರಲಿಲ್ಲ! ಶಿಖರ, ಗರ್ಭಗುಡಿ, ಅಂತರಾಳ, ಮಹಾಮಂಟಪಗಳು ಒಂದಕ್ಕೊಂದು ಸೇರಿಕೊಂಡು ಒಂದೇ ಅಕ್ಷದಲ್ಲಿ ನಿಂತಿವೆ. ವಿಶಾಲವಾದ ಜಾಗದಲ್ಲಿರುವ ಈ ದೇವಾಲಯವು ಚಿಕ್ಕ ಹಳ್ಳಿಯಲ್ಲಿ ಎದ್ದು ಕಾಣುತ್ತದೆ.

ಮುಂದುವರಿದ ನಾವು ಮುಂದೆ ನೋಡಿದ್ದು ಅರ್ಧ ಕಿಲೋಮೀಟರಿನಷ್ಟು ಸಮೀಪದಲ್ಲಿಯೇ ಇದ್ದ ದುಲ್ಹದೇವ ಮಂದಿರವನ್ನು. ಹನ್ನೆರಡನೇ ಶತಮಾನದಲ್ಲಿ ನಿರ್ಮಿಸಲಾದ ಈ ಶಿವ ದೇವಾಲಯವು ಪೂರ್ವಾಭಿಮುಖವಾಗಿದೆ. ದೇವಾಲಯದ ಹೊರಭಾಗದಲ್ಲಿ ಮೂರು ಸಾಲುಗಳಲ್ಲಿ ಶಿಲ್ಪ ಕೆತ್ತನೆಗಳಿವೆ. ಅತ್ಯಂತ ಮೇಲಿನ ಸಾಲುಗಳಲ್ಲಿ ಕೈಗಳಲ್ಲಿ ಆಯುಧ, ಹಾರ ಅಥವಾ ಸಂಗೀತದ ಉಪಕರಣಗಳನ್ನು ಹಿಡಿದುಕೊಂಡು ಹಾರಾಡುವ ಮೂರ್ತಿಗಳಿವೆ. ನಂತರದ ಸಾಲುಗಳಲ್ಲಿ ಹಯವದನ, ದಿಕ್ಪಾಲಕರು, ಶಿವಪಾರ್ವತಿಯರ ಶಿಲ್ಪ ಕೆತ್ತನೆಗಳಿವೆ. ಗರ್ಭಗುಡಿಯ ಒಳಗೆ ಶಿವಲಿಂಗವಿದೆ. ಈ ದೇವಾಲಯ ಖಜುರಾಹೋ ದೇವಾಲಯಗಳಲ್ಲಿ ಅತ್ಯಂತ ಆಧುನಿಕವಾದ ದೇವಾಲಯವಾಗಿದೆ.

ಈ ಎರಡು ದೇವಾಲಯಗಳನ್ನು ನೋಡಿದ ನಂತರ ನಾವು ನೇರವಾಗಿ ಪೂರ್ವ ಗುಂಪಿನ ದೇವಾಲಯಗಳನ್ನು ನೋಡಲು ಹೊರಟೆವು. ಸಣ್ಣ ಹಳ್ಳಿಯ ರಸ್ತೆಗಳಲ್ಲಿ ನಾವು ಕುಳಿತ ರಿಕ್ಷಾವು ಹಾರುತ್ತಾ ಓಡುತ್ತಾ ಕುಪ್ಪಳಿಸುತ್ತಾ ಹೋಗುತ್ತಿತ್ತು. ಎಮ್ಮೆಗಳ ಹಿಂಡುಗಳನ್ನು ಬಿಟ್ಟರೆ ರಸ್ತೆ ಹೆಚ್ಚಾಗಿ ಖಾಲಿಯೇ ಇತ್ತು. ನಮ್ಮಂತಹ ಪ್ರಯಾಣಿಕರನ್ನು ಕರೆದುಕೊಂಡು ಹೋಗುತ್ತಿದ್ದ ಕೆಲವು ರಿಕ್ಷಾಗಳು, ಕಾರುಗಳು ನಮಗೆ ಸಿಗುತ್ತಿದ್ದವಷ್ಟೇ.

ಪೂರ್ವ ಗುಂಪಿನ ದೇವಾಲಯಗಳ ಹತ್ತಿರ ಬರುತ್ತಿದ್ದಂತೆ ಹೊರಾಂಗಣದಲ್ಲಿ ಮಧ್ಯಪ್ರದೇಶದ ಕರಕುಶಲ ಸಾಮಾಗ್ರಿಗಳನ್ನು ಮಾರಾಟ ಮಾಡುವ ಮಳಿಗೆಗಳು ಎದುರಾದವು. ಹೊರಗಿನ ಆವರಣವನ್ನು ನೋಡುತ್ತಿದ್ದಂತೆ ಸಾಮಾನ್ಯ ಮಂದಿರಕ್ಕೆ ಬಂದಂತೆ ಕಂಡಿತು. ಕೆಲವು ಧರ್ಮಛತ್ರಗಳು, ಅಲ್ಲಿಗೆ ಬಂದವರು ಮತ್ತು ಸ್ಥಳೀಯರು ಅದೇನೊ ದೈನಂದಿನ ಚಟುವಟಿಕೆಗಳಲ್ಲಿ ಒಳಗೊಂಡಂತೆ ಕಂಡುಬಂತು. ಒಳಗೆ ಹೋಗುತ್ತಿದ್ದಂತೆ ನಮಗೆ ಜೈನ ಮಂದಿರಗಳ ಫಲಕ ಕಂಡಿತು. ಫಲಕವನ್ನು ದಾಟಿ ಮುಂದೆ ಹೋದಂತೆ ವಿದೇಶಿ ಪ್ರಯಾಣಿಕರ ಎರಡು ಮೂರು ಗುಂಪುಗಳಿದ್ದವು. ಆ ಗುಂಪಿನ ಜತೆ ಗೈಡ್‌ಗಳು ಅವರದೇ ಆದ ಜರ್ಮನಿ, ಫ್ರೆಂಚ್, ರಶ್ಯನ್ ಭಾಷೆಗಳಲ್ಲಿ ವಿವರಣೆ ನೀಡುತ್ತಿದ್ದರು. ಶಾಂತಿನಾಥ, ಪಾರ್ಶ್ವನಾಥ ಮತ್ತು ಆದಿನಾಥ ಮಂದಿರಗಳು ಒಂದೇ ಆವರಣದಲ್ಲಿವೆ. ಪಾರ್ಶ್ವನಾಥ ದೇವಾಲಯವು ಆವರಣದಲ್ಲಿರುವ ಅತ್ಯಂತ ದೊಡ್ಡ ದೇವಾಲಯವಾಗಿದೆ. ಇಲ್ಲಿನ ದೇವಾಲಯಗಳ ಹೊರಭಾಗದ ಶಿಲ್ಪ ಕೆತ್ತನೆಗಳು ಮನಮೋಹಕವಾಗಿವೆ. ಶಿಲ್ಪ ಕನ್ಯೆಯರು ಕಣ್ಣಿಗೆ ಕಾಡಿಗೆ ಹಚ್ಚುತ್ತಾ, ಕೈಗೆ ಬಳೆ ತೊಡುತ್ತಾ ತಮ್ಮನ್ನು ಅಲಂಕಾರಗೊಳಿಸುತ್ತಿದ್ದರು.



ಈ ಪೂರ್ವದೇವಾಲಯ ಗುಂಪಿನಲ್ಲಿ ಜೈನ ದೇವಾಲಯಗಳಲ್ಲದೇ ಇನ್ನೂ ಕೆಲವು ದೇವಾಲಯಗಳಿವೆ. ಅವುಗಳಲ್ಲಿ ಕೆಲವನ್ನು ನಾವು ಸಂದರ್ಶಿಸಿದೆವು. ಅವುಗಳಲ್ಲಿ ಮುಖ್ಯವಾಗಿ ವಾಮನ ದೇವಾಲಯ, ಗಂಟೆ ದೇವಾಲಯ, ಜವರಿ ದೇವಾಲಯ, ಬ್ರಹ್ಮ ಮತ್ತು ಹನುಮಾನ್ ದೇವಾಲಯಗಳು ಸೇರಿವೆ. ಇತಿಹಾಸ, ವಾಸ್ತುಶಿಲ್ಪ, ಶಿಲ್ಪಕಲೆಯ ಆಸಕ್ತರಿಗೆ ಇಲ್ಲಿನ ದೇವಾಲಯಗಳು ಹಲವಾರು ಕುತೂಹಲಕಾರಿ ವಿಷಯಗಳನ್ನು ಹೊರಗೆಡಹಬಹುದು.

ದಕ್ಷಿಣ ಮತ್ತು ಪೂರ್ವ ಗುಂಪಿನ ದೇವಾಲಯಗಳನ್ನು ನೋಡಿ ಬಂದ ನಾವು ಬಹಳ ಮುಖ್ಯವಾದ ಪಶ್ಚಿಮ ಗುಂಪಿನ ದೇವಾಲಯಗಳನ್ನು ನೋಡಲು ಬಂದೆವು. ಒಂದೇ ಸಮುಚ್ಚಯದೊಳಗೆ ಹಲವಾರು ದೇವಾಲಯಗಳಿವೆ. ಈ ಸಮುಚ್ಚಯದೊಳಗೆ ಹೋಗಲು ಪುರಾತತ್ವ ವಿಭಾಗದ ಮೂಲಕ ಅಲ್ಲೇ ಇರುವ ಟಿಕೇಟು ಕೌಂಟರಿನಿಂದ ಟಿಕೆಟ್ ತೆಗೆದುಕೊಳ್ಳಬೇಕು. ಸಾಮಾನ್ಯ ಕ್ಯಾಮಾರಗಳನ್ನು ಒಳಗೆ ಕೊಂಡೊಯ್ಯಬಹುದಾದರೂ ಟ್ರೈಪಾಡ್ ಮತ್ತು ವಿಡಿಯೋ ಕ್ಯಾಮರಗಳಿಗೆ ವಿಶೇಷ ಅನುಮತಿಯನ್ನು ಪಡೆಯಬೇಕಾಗುತ್ತದೆ. ಸುಂದರ ಹುಲ್ಲು ಹಾಸು, ಒಂದು ದೇವಾಲಯದಿಂದ ಇನ್ನೊಂದು ದೇವಾಲಯಕ್ಕೆ ನಡೆದು ಹೋಗಲು ವ್ಯವಸ್ಥಿತ ಕಾಲುದಾರಿ, ಕುಡಿಯುವ ನೀರಿನ ವ್ಯವಸ್ಥೆಗಳನ್ನೆಲ್ಲಾ ಇಲ್ಲಿ ಮಾಡಲಾಗಿದೆ. ಈ ಸಮುಚ್ಚಯದೊಳಗೆ ಸೂರ್ಯೋದಯದಿಂದ ಸೂರ್ಯಾಸ್ತದ ವರೆಗೆ ಮಾತ್ರ ಪ್ರವೇಶವಿದೆ. ದೇವಾಲಯಗಳ ಕುರಿತು ವಿಶೇಷ ಮಾಹಿತಿ ನೀಡುವ ಗೈಡ್‌ಗಳೂ ಇಲ್ಲಿ ಲಭ್ಯ.

ಪಶ್ಚಿಮ ಗುಂಪಿನ ದೇವಾಲಯ ಸಮೂಹಕ್ಕೆ ಪ್ರವೇಶಿಸುವಂತೆ ನಾವು ಎಡದಿಂದ ನಮ್ಮ ದೇವಾಲಯ ವೀಕ್ಷಣೆಯನ್ನು ಆರಂಭಿಸಿದರೆ ನಮಗೆ ಲಕ್ಷ್ಮಿ ಮತ್ತು ವರಾಹ ದೇವಾಲಯಗಳು ಸಿಗುತ್ತವೆ. ವರಾಹ ಮಂದಿರದಲ್ಲಿ ದೊಡ್ಡದಾದ ವರಾಹ (ಹಂದಿಯ) ಮೂರ್ತಿಯಿದೆ. ಅತ್ಯಂತ ಸುಂದರ ಕೆತ್ತನೆಯನ್ನು ಈ ಮೂರ್ತಿಯಲ್ಲಿ ಕಾಣಬಹುದು. ಅದರ ಎದುರುಗಡೆಗೆ ವಿಶಾಲವಾದ ಲಕ್ಷ್ಮಣ ದೇವಾಲಯವಿದೆ. ಇದು ಹತ್ತನೆ ಶತಮಾನದ ಆರಂಭದಲ್ಲಿ ನಿರ್ಮಿಸಿದ ದೇವಾಲಯವಾಗಿದೆ. ಇಲ್ಲಿಯ ಗೋಪುರಗಳಲ್ಲಿಯೂ ಖಜುರಾಹೋದ ವಿಶಿಷ್ಟ ಶಿಲ್ಪ ಕೆತ್ತನೆಗಳನ್ನು ಕಾಣಬಹುದು. ಸ್ವಲ್ಪವೇ ದೂರವಿದ್ದ ಕಂದರಿಯಾ ದೇವಾಲಯ ನಮ್ಮನ್ನು ಇಲ್ಲಿಂದಲೇ ಕರೆಯುವಂತಿತ್ತು.

ಹನ್ನೊಂದನೆ ಶತಮಾನದ ಆರಂಭದಲ್ಲಿ ನಿರ್ಮಿಸಲಾದ ಕಂದರಿಯಾ ಮಹಾದೇವ ದೇವಾಲಯವು ಅತ್ಯಂತ ದೊಡ್ಡದಾಗಿದೆ, ಸುಂದರವಾಗಿದೆ, ಮಾತ್ರವಲ್ಲ ಶಿಲ್ಪ ಕಲೆಯ ವಿನ್ಯಾಸದಿಂದಲೂ ಆಕರ್ಷಣೀಯವಾಗಿದೆ. ಮಿಥುನ ಶಿಲ್ಪಗಳನ್ನು, ಸುಂದರ ಸುರಕನ್ನೆಯರನ್ನು ಕೆತ್ತಿದ ಶಿಲ್ಪಿಗಳ ಕೌಶಲ್ಯತೆಯನ್ನು ಮೆಚ್ಚಬೇಕಾದುದೇ. ಇದೇ ದೇವಾಲಯದ ಅಡಿಪಾಯದ ಮೇಲೆ ಜಗದಂಬಾ ದೇವಾಲಯವೂ ಇದೆ. ಇವೆರಡರ ನಡುವೆ ಶಾರ್ದೂಲಾ ವಿಗ್ರಹವೊಂದಿದೆ. ಜಗದಂಬಾ ದೇವಾಲಯವು ಮಿಥುನ ಶಿಲ್ಪಗಳಿಂದ ಶೋಭಿಸುತ್ತಿದೆ. ಇದೇ ಸಾಲಿನಲ್ಲಿ ಸ್ವಲ್ಪ ದೂರದಲ್ಲಿ ಸೂರ್ಯ ದೇವಾಲಯವೆಂದೂ ಕರೆಯಲಾಗುವ ಮಂದಿರ, ಪಾರ್ವತಿ, ವಿಶ್ವನಾಥ, ನಂದಿ ದೇವಾಲಯಗಳೂ ಇವೆ. ಶಿಲ್ಪ ಸೌಂದರ್ಯವನ್ನು ಕಂಡ ಕಣ್ಣುಗಳು ಬಳಲದಿದ್ದರೂ ಕಾಲುಗಳು ಸುಸ್ತಾದವು. ಮುಖ್ಯ ದೇವಾಲಯಗಳನ್ನು ವಿಶೇಷ ಆಸಕ್ತಿಯಿಂದ ನೋಡಿದ ನಾವು ಉಳಿದ

ದೇವಾಲಯಗಳನ್ನು ಮೇಲಿಂದ ಮೇಲಷ್ಟೇ ನೋಡಿದೆವು.

ಒಂದೆಡೆ ಗಂಡು ಮತ್ತು ಹೆಣ್ಣಿನ ಮೈಥುನದ ವಿವಿಧ ಭಂಗಿಗಳು, ಮಿಗಿಲಾದ ಕಾಮಸುಖವನ್ನು ಪಡೆಯುವ ಗುಟ್ಟನ್ನು ವಿವರಿಸುವ ವಾತ್ಸಾಯನನ ಕಾಮಸೂತ್ರದಂತಹ ಕೃತಿ. ಇನ್ನೊಂದೆಡೆ ಆ ಕೃತಿಯ ಅಕ್ಷರಗಳಿಗೆ ರೂಪ ಕೊಟ್ಟ ಈ ಶಿಲಾ ಸುರಸುಂದರಿಯರು. ಖಜುರಾಹೋ ಒಂದು ಅವ್ಯಕ್ತ ಅನುಭವ. ಶಿಲ್ಪವನ್ನು ಕಡೆದ ಶಿಲ್ಪಿಗಳ ಕಾರ್ಯ ಕೌಶಲ್ಯತೆಗೆ ನಾವು ನಿಬ್ಬೆರಗಾದೆವು. ಹತ್ತನೇ ಶತಮಾನದ ಚಂಡೇಲ ರಾಜವಂಶದ ರಾಜರು ನಿರ್ಮಿಸಿದ ದೇವಾಲಯಗಳಲ್ಲಿ ಮೈಥುನದ ವಿವಿಧ ಭಂಗಿಗಳ ಶಿಲ್ಪಗಳು ಒಂದು ಸಾವಿರ ವರ್ಷಗಳು ಕಳೆದರೂ ನೋಡುಗರನ್ನು ಆಕರ್ಷಿಸುತ್ತವೆ.

ಖಜುರಾಹೋದಲ್ಲಿನ ಮಿಥುನ ಶಿಲ್ಪಗಳು ದೇವಾಲಯಗಳನ್ನು ಅಲಂಕರಿಸಿರುವ ಕುರಿತು ದೇಶವಿದೇಶದ ವಿದ್ವಾಂಸರು ಅನೇಕ ರೀತಿಯ ಸಿದ್ಧಾಂತ ಮತ್ತು ಟಿಪ್ಪಣಿಗಳನ್ನು ನೀಡಿದ್ದಾರೆ. ಇಲ್ಲಿ ಶಿಲ್ಪಿಗಳು ತಮ್ಮ ಕಲಾಪ್ರತಿಭೆಯನ್ನು ಮೆರೆದುದನ್ನು ಕಂಡಾಗ ಆಧುನಿಕ ಕಲಾವಿದರ ವಿವಾದಕ್ಕೆ ಒಳಗಾಗುವ ಕಲಾಕೃತಿಗಳು ಏನೂ ಅಲ್ಲ ಎಂಬಂತಹ ಭಾವನೆ ಬರುತ್ತದೆ. ಸುಮಾರು ಸಾವಿರ ವರ್ಷಗಳಷ್ಟು ಹಿಂದಿನ ಮುಕ್ತ ವಾತಾವರಣ ಕಲಾವಿದನಿಗೆ ಅದೆಷ್ಟು ಸಾಧ್ಯತೆಗಳನ್ನು ಒದಗಿಸಿಕೊಟ್ಟಿದೆ ಎಂದನಿಸುತ್ತದೆ. ಧಾರ್ಮಿಕ ಭಕ್ತಿ ಮತ್ತು ಲೌಕಿಕ ಕಾಮಗಳೆರಡೂ ಇಲ್ಲಿ ಮಿಲನಗೊಂಡು ಬದುಕು ಮತ್ತು ಸಮಾಜ ಬಂಧಮುಕ್ತವಾಗಿದೆ.

ದೇವಾಲಯಗಳನ್ನು ನೋಡಿ ದಣಿದಿದ್ದ ನಮಗೆ ಹಸಿವು ಆಗುತ್ತಿತ್ತು. ಖಜುರಾಹೋದಲ್ಲಿ ಪ್ರಸಿದ್ಧವಾಗಿರುವ ರಾಜಾ ಕೆಫೆಗೆ ಹೋಗಿ ನಾವು ಸರಳವಾದ ಉತ್ತರಭಾರತೀಯ ಊಟವನ್ನು ಮಾಡಿದೆವು. ನಂತರ ಹೋಟೆಲಿಗೆ ಹೋಗಿ ದಣಿವಾರಿಸಿಕೊಂಡೆವು.

ಸಂಜೆ ಹೊತ್ತಿಗೆ ನಾವು ಪಶ್ಚಿಮ ದೇವಾಲಯಗಳ ಗುಂಪಿನ ಪಕ್ಕದಲ್ಲಿದ್ದ ಕೆಲವು ಅಂಗಡಿಗಳಲ್ಲಿ ಶಾಪಿಂಗ್‌ಗೆ ಹೋದೆವು. ಮಧ್ಯಪ್ರದೇಶದ ಕರಕುಶಲ ಸಾಮಾನುಗಳು, ಬಟ್ಟೆ ಬರೆಗಳು ಧಾರಾಳವಾಗಿ ಇದ್ದರೂ ಅವುಗಳ ಬೆಲೆ ಕಡಿಮೆಯೇನಿರಲಿಲ್ಲ. ಪಶ್ಚಿಮ ದೇವಾಲಯ ಸಮೂಹದೊಳಗೆ ಸಂಜೆ ಏಳಕ್ಕೆ ನಡೆಯುವ ಸೌಂಡ್ ಎಂಡ್ ಲೈಟ್ ಶೋ ಗಾಗಿ ನಾವು ಕಾಯುತ್ತಿದ್ದೆವು. ಸೂರ್ಯಾಸ್ತವನ್ನು ನಾವು ಅಲ್ಲಿನ ಶಿವಸಾಗರ ಸರೋವರದ ಮುಂದೆ ನಿಂತು ಆನಂದಿಸಿದೆವು. ನಂತರ ಪ್ರೇಮಸಾಗರ ಸರೋವರದ ದಂಡೆಗೆ ಬಂದೆವು.

ಖಜುರಾಹೋದಲ್ಲಿರುವ ಸುಮಾರು ಹದಿನೆಂಟು ದೇವಾಲಯಗಳಲ್ಲಿ ಒಂದರಲ್ಲಿ ಮಾತ್ರ ಈಗ ಪೂಜೆ ನಡೆಯುತ್ತಿದೆ. ಅದೆಂದರೆ ಮಾತಾಂಗೇಶ್ವರ ದೇವಾಲಯ. ಅದು ಸಮುಚ್ಚಯದ ಹೊರಗಿದ್ದು ಭಕ್ತರಿಂದ ತುಂಬಿರುತ್ತದೆ. ಶಿವಲಿಂಗದ ಜತೆಗೆ ಇಲ್ಲಿ ಯೋನಿಯನ್ನೂ ಪೂಜಿಸುತ್ತಾರೆ ಎಂದು ಹೇಳುತ್ತಾರೆ. ಕತ್ತಲಾಗಿದ್ದುದರಿಂದ ನಾವು ಹೊರಗಿನಿಂದಲೇ ನೋಡಿ ಬಂದೆವು. ಇದೇ ದೇವಾಲಯದ ಸ್ವಲ್ಪ ದೂರ ಶಿವಸಾಗರ ಸರೋವರದ ಬದಿಗೇ ಚೌಸಟ್ ಯೋಗಿನಿಗಳ ಮಂದಿರವಿದೆ. ಅದು ಶಿಥಿಲಾವಸ್ಥೆಯಲ್ಲಿದೆ. ಕಾಳಿಯ ಬೆಂಗಾವಲಿಗಿರುವ ಅರುವತ್ತನಾಲ್ಕು ಯೋಗಿನಿಯರ ಈ ಮಂದಿರ ಸುಮಾರು ಕ್ರಿಸ್ತ ಶಕ ೯೦೦ ರಲ್ಲಿ ರಚಿತವಾಗಿದೆ ಎನ್ನುತ್ತಾರೆ. ತಂತ್ರವಿದ್ಯೆಯಲ್ಲಿ ತೊಡಗಿಸಿಕೊಂಡವರು ಈ ಯೋಗಿನಿಯರನ್ನು ಪೂಜಿಸುತ್ತಾರೆ. ಇಂತಹ ಚೌಸಟ್ ಯೋಗಿನಿಯರನ್ನು ದೇಶದ ಇತರೆಡೆಯೂ ನಾನು ಕಂಡಿದ್ದೇನೆ.

ಸೌಂಡ್ ಎಂಡ್ ಲೈಟ್ ಶೋ ಗಾಗಿ ಬಹಳಷ್ಟು ಪ್ರವಾಸಿಗರು ಕಾಯುತ್ತಿದ್ದರು. ಈ ಕಾರ್ಯಕ್ರಮ ಪ್ರವಾಸಿಗರಲ್ಲಿ ಬಹಳ ಜನಪ್ರಿಯ ಎಂದನಿಸಿತು. ಅದರ ಪ್ರವೇಶ ದರವು ದೇಶೀಯ ಪ್ರವಾಸಿಗರಿಗೆ ಒಂದಾದರೆ, ವಿದೇಶಿ ಪ್ರವಾಸಿಗರಿಗೆ ಹೆಚ್ಚಾಗಿತ್ತು. ಈ ಪ್ರದರ್ಶನದಲ್ಲಿ ಅಮಿತಾಬ್ ಬಚ್ಚನ್ ಅವರ ಧ್ವನಿಯನ್ನು ಉಪಯೋಗಿಸಲಾಗಿದೆ ಎಂದು ಹೊರಗೆ ಹಾಕಿದ ಬೋರ್ಡ್ ತಿಳಿಸುತ್ತಿತ್ತು. ಈ ಪ್ರದರ್ಶನವು ಸುಮಾರು 40 ನಿಮಿಷಗಳಷ್ಟಿದ್ದು ಪ್ರತಿ ದಿನ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಒಂದೊಂದು ಪ್ರದರ್ಶನ ನಡೆಯುತ್ತದೆ. ಟಿಕೇಟು ತೆಗೆದುಕೊಂಡ ನಾವೆಲ್ಲ ಒಳಗೆ ಹೋದೆವು. ಸೊಳ್ಳೆಗಳು ನಮ್ಮನ್ನು ಸುತ್ತುವರಿಯುತ್ತಿದ್ದವು. ದೆಹಲಿಯಿಂದ ಬಂದ ಮಹಿಳೆಯೊಬ್ಬಳು ತನ್ನ ಮಕ್ಕಳಿಗೆ ಒಡಾಮಸ್ ಹಚ್ಚಲು ಹೇಳುತ್ತಿದ್ದುದನ್ನು ಕೇಳಿ, ಎಲಾ, ಇವರು ಬಹಳಷ್ಟು ತಯಾರಿಯಿಂದಲೇ ಬಂದಿದ್ದಾರಲ್ಲ ಅಂತನಿಸಿತು.

ಖಜುರಾಹೋದ ಕತೆಯನ್ನು ತಿಳಿಸುವ ಈ ಪ್ರದರ್ಶನದಲ್ಲಿ ಅಮಿತಾಬ್ ಬಚ್ಚನ್‌ನ ಸ್ವರದಲ್ಲಿ ಓರ್ವ ಶಿಲ್ಪಿಯ ಮೂಲಕ ಕತೆಯನ್ನು ಹೇಳಲಾಗುತ್ತದೆ. ಶಿಲ್ಪಿಯ ಸ್ವರ ಬಂದಾಗಲೆಲ್ಲಾ ನಮ್ಮಿಂದ ಸ್ವಲ್ಪ ದೂರದಲ್ಲಿ ಬೆಳಕು ಮೂಡಿ ವಿಶಿಷ್ಟ ಆಕೃತಿ ಮೂಡುತ್ತಿತ್ತು. ನಮ್ಮ ಕಿರಿಮಗ ಚೇತು ಅದನ್ನು ನೋಡಿ ಅಮಿತಾಬ್ ಬಚ್ಚನ್ ಅದು ಭೂತವೋ ಎಂದು ಕೇಳುತ್ತಿದ್ದ. ಅವನಿಗೆ ವಿವರಣೆ ಕೊಡಲು ಬಹಳ ಕಷ್ಟವಾಯಿತು. ಮುರಿದು ಬಿದ್ದ ಮೂರ್ತಿಗಳನ್ನು ಒಂದೆಡೆ ಇರಿಸಿ ಅದಕ್ಕೆ ಬೆಳಕು ಮೂಡಿಸಿದ್ದರು. ಕತ್ತಲ ರಾತ್ರಿಯ ಆ ವಾತಾವರಣದಲ್ಲಿ ಕತೆಯ ಹಿನ್ನಲೆಯಲ್ಲಿ ಅದು ಬಹಳಷ್ಟು ವಿಶಿಷ್ಟವಾಗಿ ಕಾಣುತ್ತಿತ್ತು.

ಖಜುರಾಹೋದಲ್ಲಿ ಚಂಡೇಲಾ ರಾಜವಂಶದ ಸ್ಥಾಪನೆ ಕುರಿತಾದ ವಿಸ್ಮಯಕಾರಿ ಕತೆಯೊಂದು ದೊರೆಯಿತು. ಜನಪದೀಯ ಮೂಲದ ಈ ಕತೆಯನ್ನು ಇತಿಹಾಸಕಾರರು ಸ್ವೀಕರಿಸುವುದೂ ಇಲ್ಲ, ನಿರಾಕರಿಸುವುದೂ ಇಲ್ಲ. ಈ ಕತೆಯನ್ನು ನಿಮಗೆ ಮುಂದಿನ ಪುಟಗಳಲ್ಲಿ ನೀಡುವೆ. ಖಜುರಾಹೋದ ದೇವಾಲಯಗಳನ್ನು ಹತ್ತನೆ ಶತಮಾನದಲ್ಲಿ ನಿರ್ಮಿಸಲಾಗಿದ್ದರೂ ಅದು ಬಹಳಷ್ಟು ವರ್ಷ ನಿಗೂಢವಾಗಿ ಮಧ್ಯಪ್ರದೇಶದ ಅರಣ್ಯಗಳ ನಡುವೆ ಮರೆಯಾಗಿತ್ತು.

ಸಾವಿರದ ಎಂಟುನೂರ ಮೂವತ್ತೆಂಟನೇ ಇಸವಿಯ ಫೆಬ್ರವರಿ ತಿಂಗಳಲ್ಲಿ ಬೆಂಗಾಲ್ ಇಂಜಿನೀಯರಿಂಗ್‌ನ ಯುವ ಬ್ರಿಟಿಷ್ ಅಧಿಕಾರಿ ಕ್ಯಾಪ್ಟನ್ ಟಿ.ಎಸ್. ಬರ್ಟ್ ಕೆಲಸದ ನಿಮಿತ್ತ ಮಧ್ಯಭಾರತಕ್ಕೆ ಬಂದಿದ್ದ. ಅವನು ಹೋಗುತ್ತಿದ್ದ ಪಲ್ಲಕಿಯನ್ನು ಹೊರುತ್ತಿದ್ದ ಸ್ಥಳೀಯರು ಖಜುರಾಹೋ ಎಂಬ ಅದ್ಭುತ ಸ್ಥಳದ ಕುರಿತು ವಿವರಣೆ ನೀಡಿದರು. ಅವರು ವಿವರಿಸಿದ ಸ್ಥಳವನ್ನು ನೋಡದೇ ಹೋಗಲು ಬರ್ಟ್‌ನ ಮನಸ್ಸು ಕೇಳಲಿಲ್ಲ. ರಾತ್ರಿಯಿಡೀ ಪ್ರಯಾಣಿಸಿ ಮುಂಜಾನೆಯ ಹೊತ್ತಿಗೆ ಖಜುರಾಹೋ ಪ್ರದೇಶಕ್ಕೆ ಬಂದನು. ಹಳ್ಳಿಯಲ್ಲಿದ್ದ ದೇವಾಲಯಗಳನ್ನು ಕಂಡು ಇನ್ನಷ್ಟು ಕುತೂಹಲಿಗನಾಗಿ ದಿನವಿಡೀ ಖಜುರಾಹೋ ಹಳ್ಳಿಯನ್ನು ಸುತ್ತುತ್ತಾ ಇದ್ದ ಎಲ್ಲಾ ದೇವಾಲಯಗಳನ್ನು ನೋಡಲು ಹೋದನು. ಅರಣ್ಯದ ನಡುವೆ ಮರೆತು ಹೋಗಿದ್ದ ಈ ರಮ್ಯ ಮನೋಹರ ದೇವಾಲಯಗಳ ಖಜುರಾಹೋಗೆ ಪ್ರವಾಸಿಗರು ಬರಲು ಆರಂಭವಾಯಿತು. ವಿಮಾನ ನಿಲ್ದಾಣ, ಪಂಚತಾರಾ ಹೋಟೆಲ್‌ಗಳು ನಿರ್ಮಾಣಗೊಂಡು ಜಗತ್ತಿನಾದ್ಯಂತದಿಂದ ಭಾರತಕ್ಕೆ ಬರುವ ಕುತೂಹಲಿ ಪ್ರವಾಸಿಗರನ್ನು ಸ್ವಾಗತಿಸುತ್ತಿದೆ ಖಜುರಾಹೋ.

ರಾತ್ರಿಯೂಟಕ್ಕೆ ನಾವಿದ್ದ ಹೋಟೆಲ್‌ನ ಅಡುಗೆಯವನಿಗೆ ಹೇಳಿ ಮಾಡಿಸಿದ ಸರಳ ಉತ್ತರ ಭಾರತೀಯ ಊಟವನ್ನು ಮಾಡಿ ಚಂಡೇಲ ರಾಜರ ಕತೆಯನ್ನು ಮೆಲುಕು ಹಾಕುತ್ತಾ ಮಲಗಿದೆವು.

ಮರುದಿನ ನಾವು ಹೊರಡುವ ಕಾರ್ಯಕ್ರಮವಿತ್ತು. ನಾನು ಮುಂಜಾನೆ ಬೇಗ ಎದ್ದು ಸೂರ್ಯೋದಯದ ಹೊತ್ತಿಗೆ ಪಶ್ಚಿಮ ದೇವಾಲಯಗಳ ಸಮೂಹಕ್ಕೆ ಕ್ಯಾಮರಾ ಹಿಡಿದುಕೊಂಡು ಬಂದೆ. ಮುಂಜಾನೆಯ ಸೂಕ್ಷ್ಮ ಬಿಸಿಲು ಹೊರಾಂಗಣ ಛಾಯಾಗ್ರಹಣಕ್ಕೆ ಅತಿ ಸೂಕ್ತವಾದುದು ಎಂದುಕೊಂಡು ದೇವಾಲಯಗಳ ಚಿತ್ರಗಳನ್ನು ಕ್ಲಿಕ್ಕಿಸಲು ಆರಂಭಿಸಿದೆ. ಮಿಥುನ ಶಿಲ್ಪಗಳನ್ನು ಮತ್ತೊಮ್ಮೆ ಕಣ್ತುಂಬಾ ನೋಡಿದೆ.

ನಮ್ಮ ಮರುಪ್ರಯಾಣವು ಖಜುರಾಹೋದಿಂದ ಝಾನ್ಸಿ ವರೆಗೆ ರಸ್ತೆಮಾರ್ಗದಲ್ಲಿ. ಅಲ್ಲಿಂದ ದೆಹಲಿಗೆ ಹೊರಡುವ ಶತಾಬ್ದಿ ಎಕ್ಸ್‌ಪ್ರೆಸ್‌ಗೆ ತತ್ಕಾಲ್ ಸೇವೆಯಲ್ಲಿ ಟಿಕೇಟು ಕಾದಿರಿಸಿ ಬಂದಿದ್ದೆವು. ರೈಲು ಝಾನ್ಸಿಯಿಂದ ಐದು ಗಂಟೆಗೆ ಹೊರಡುವುದರಿಂದ ನಾವು ಬೆಳಗ್ಗೆ ಎಂಟುಗಂಟೆಗೆ ಖಜುರಾಹೋದಿಂದ ಹೋಗುವ ಯೋಜನೆ ಹಾಕಿದ್ದೆವು. ಖಜುರಾಹೋದ ರಾಜಾ ಯಶೋವರ್ಮನ್ ಬಸ್ ನಿಲ್ದಾಣಕ್ಕೆ ಬಂದೆವು. ಬಸ್ಸು ಬರಲು ಇನ್ನೂ ಸಮಯವಿದ್ದುದರಿಂದ ಅಲ್ಲಿಯ ಸ್ಥಳೀಯರಂತೆ ನಾವೂ ಚಹಾ ಕುಡಿದೆವು. ಸ್ವಲ್ಪ ಹೊತ್ತಲ್ಲೇ ಬಸ್ ನಿಲ್ದಾಣದಿಂದ ನಮಗೆ ಛತ್ತರ್‌ಪುರಕ್ಕೆ ಹೋಗುವ ಬಸ್ಸು ಸಿಕ್ಕಿತು. ತುಂಬಿ ತುಳುಕುತ್ತಿದ್ದ ಬಸ್ಸಿನೊಳಗೆ ನುಸುಳುತ್ತಿದ್ದಂತೆ ಕಂಡಕ್ಟರ್ ನಮ್ಮನ್ನು ಡ್ರೈವರನ ಪಕ್ಕದ ಬಾನೆಟ್‌ನ ಮೇಲೆ ಹಾಸಿದ ಮೆತ್ತೆಯ ಮೇಲೆ ಕುಳಿತುಕೊಳ್ಳಲು ಹೇಳಿದ. ನೋಡಿದರೆ ಅಲ್ಲಿ ಮೊದಲೇ ಜನ ಕುಳಿತಿದ್ದರು. ಬೈಠಿಯೇ ಎಂದು ನಮ್ಮನ್ನು ಆದೇಶಿಸುವಂತೆ ಅಲ್ಲಿ ತನ್ನಷ್ಟಕ್ಕೇ ಜಾಗವಾಯಿತು.

ಈ ವರ್ಷ ಬಿಡುಗಡೆಯಾದ ಪೀಪ್ಲಿ ಲೈವ್ ಸಿನಿಮಾ ಮಧ್ಯಪ್ರದೇಶದಲ್ಲಿ

ಚಿತ್ರಿತವಾಗಿತ್ತು. ಅದರ ಪಾತ್ರಗಳೂ ಅಲ್ಲಿಯದೇ ಸ್ಥಳೀಯ ಭಾಷೆಯನ್ನು ಮಾತಾಡುತ್ತಿದ್ದವು. ಸಿನಿಮಾದ ಪಾತ್ರದಲ್ಲಿರುವಂತಹದೇ ವ್ಯಕ್ತಿಗಳು ಬಸ್ಸಿನಲ್ಲಿದ್ದರು. ಅವರ ವೇಷಭೂಷಣ, ಮಾತಿನ ಮೋಡಿಯನ್ನು ಕಂಡಾಗ ನತ್ತ ಮತ್ತು ಬುದ್ಯ ಪಾತ್ರಗಳೇ ಲೈವ್ ಆದಂತೆ ಅನಿಸಿತು. ನಾವು ಛತ್ತರ್‌ಪುರದಿಂದ ಇನ್ನೊಂದು ಬಸ್ಸನ್ನು ಝಾನ್ಸಿಗಾಗಿ ಹಿಡಿಯಬೇಕಿತ್ತು. ಆದಷ್ಟು ಬೇಗ ಝಾನ್ಸಿ ತಲಪುವುದು ನಮ್ಮ ಉದ್ದೇಶವಾಗಿತ್ತು. ಛತ್ತರ್‌ಪುರ ತಲುಪಿದೊಡನೆ ನಮಗೆ ಝಾನ್ಸಿಗೆ ಹೋಗುವ ಬಸ್ಸೇನೋ ಸಿಕ್ಕಿತು.

ಸ್ಥಳೀಯ ಬಸ್ಸಾಗಿದ್ದುದರಿಂದ ರಸ್ತೆಯುದ್ದಕ್ಕೂ ಪ್ರಯಾಣಿಕರನ್ನು ಹತ್ತಿಸುತ್ತಾ ಇಳಿಸುತ್ತಾ ಬಸ್ಸು ಮೌರಾಣಿಪುರ್ ಎಂಬ ಉತ್ತರಪ್ರದೇಶದ ಜಿಲ್ಲಾ ಕೇಂದ್ರವೊಂದಕ್ಕೆ ಬಂತು. ಮೌರಾಣಿಪುರದಲ್ಲಿ ಕಂಡಕ್ಟರನು ಈ ಬಸ್ಸು ಇಲ್ಲೇ ನಿಲ್ಲುವುದು. ಇದೇ ಕೊನೆ ಸ್ಟಾಪ್. ಝಾನ್ಸಿಗೆ ಹೋಗುವವರು ಇನ್ನೊಂದು ಬಸ್ಸಿಗೆ ಹೋಗಿ ಎಂದು ಬಸ್ಸನು ತೋರಿಸಿ ಅದರ ಕಂಡಕ್ಟರನಿಗೆ ನಮ್ಮೆಲ್ಲರ ಟಿಕೇಟನ್ನು ಮಾನ್ಯ ಮಾಡುವಂತೆ ಹೇಳಿದ. ಹೀಗೇಕೆ ಎಂದು ಸ್ಥಳೀಯರಲ್ಲಿ ಕೇಳಿದಾಗ ಡ್ರೈವರನಿಗೆ ಮನಸ್ಸಾಗದಿದ್ದರೆ ಆತ ಝಾನ್ಸಿಗೆ ಹೋಗಲಾರ. ನೀವೇನು ಚಿಂತಿಸಬೇಡಿ ನಿಮಗೆ ಝಾನ್ಸಿ ಬಸ್ಸು ಸಿಕ್ಕಿತಲ್ಲಾ ಎಂದ. ಕಾರಣ ಇನ್ನೇನೋ ಇರಬೇಕೆಂಬ ಗುಮಾನಿ ನನಗಾಯಿತು.

ನಮ್ಮಂತೆ ಖಜುರಾಹೋ ನೋಡಲು ಬಂದಿದ್ದ ಇಬ್ಬರು ಬಿಹಾರಿನ ಪ್ರವಾಸಿಗರೂ ಬಸ್ಸಲ್ಲಿದ್ದರು. ಅವರೂ ಝಾನ್ಸಿಯಿಂದ ಮುಂದೆ ಹೋಗಲು ರೈಲು ಹಿಡಿಯಲೆಂದೇ ಹೋಗುತ್ತಿದ್ದರು. ಝಾನ್ಸಿ ಬಸ್ ನಿಲ್ದಾಣದಿಂದ ರೈಲು ನಿಲ್ದಾಣಕ್ಕೆ ಎಷ್ಟು ದೂರವೆಂದೂ ಗೊತ್ತಿರಲಿಲ್ಲ. ಬಸ್ಸಿನ ಸರಾಸರಿ ವೇಗ, ಇನ್ನು ಹೋಗಲಿರುವ ದೂರ ನಮ್ಮಲ್ಲಿ ಇರುವ ಸಮಯ ಎಲ್ಲಾ ಲೆಕ್ಕ ಹಾಕಿ ಬಸ್ಸು ಐದು ಗಂಟೆಗೆ ತಲುಪುವ ಭರವಸೆ ನನಗೆ ಇತ್ತು. ಮತ್ತೊಂದು ಕಡೆ ಡ್ರೈವರ್ ಸುಮಾರು ಇಪ್ಪತ್ತು ನಿಮಿಷ ಬಸ್ಸು ನಿಲ್ಲಿಸಿ ನನ್ನ ಲೆಕ್ಕಾಚಾರವನ್ನೆಲ್ಲಾ ಬುಡಮೇಲು ಮಾಡುತ್ತಿದ್ದ. ಶತಾಬ್ದಿ ರೈಲು ತಪ್ಪಿದರೆ ಮುಂದಿನ ಯೋಜನೆಯ ಕುರಿತು ಯೋಚಿಸತೊಡಗಿದೆ.

ಕೊನೆಗೂ ಬಸ್ಸು ಐದು ಗಂಟೆಯ ಹೊತ್ತಿಗೆ ಝಾನ್ಸಿ ತಲುಪಿತು. ಬಸ್ಸಿನಿಂದ ಇಳಿಯುತ್ತಿದ್ದಂತೆ ಅಟೋರಿಕ್ಷಾವೊಂದನ್ನು ಹಿಡಿದು ಸೀದಾ ರೈಲ್ವೇ ನಿಲ್ದಾಣಕ್ಕೆ ಹೋದೆವು. ಸಂಜೆ ಐದು ಹದಿನೈದರ ಶತಾಬ್ದಿಗೆ ನಮ್ಮ ಟಿಕೇಟಿತ್ತು. ರೈಲ್ವೇ ನಿಲ್ದಾಣ ಒಳ ಹೋಗುವಾಗ ಅಲ್ಲಿನ ಗಡಿಯಾರ ಐದು ಹದಿಮೂರು ಎಂದು ತೋರಿಸುತ್ತಿತ್ತು. ರೈಲು ಯಾವ ಫ್ಲಾಟ್‌ಫಾರಂನಲ್ಲಿ ನಿಲ್ಲುವುದೆಂದೂ ಗೊತ್ತಿರಲಿಲ್ಲ. ಪೋಲೀಸರೊಬ್ಬರನ್ನು ಕೇಳಿದಾಗ ಅವರು ವಿರುದ್ಧ ದಿಕ್ಕಿಗೆ ಹೋಗುತ್ತಿದ್ದ ನಮ್ಮನ್ನು ಸರಿಯಾದ ಫ್ಲಾಟ್‌ಫಾರಂ ಕಡೆ ಕಳುಹಿಸಿದರು. ಅದಾಗಲೇ ರೈಲು ಹೊರಡಲು ಹಸಿರು ನಿಶಾನೆ ತೋರಿಸಿಯಾಗಿತ್ತು. ನಾವೆಲ್ಲರೂ ಓಡಿ ಓಡಿ ಕೊನೆ ಕಂಪಾರ್ಟ್‌ಮೆಂಟ್ ಹತ್ತಿದೆವು. ಉಸಿರಾಡಲೂ ಆಗುತ್ತಿರಲಿಲ್ಲ. ಹತ್ತಿದ ರೈಲು ನಾವು ಹೋಗಬೇಕಾದ ರೈಲೇ ಎಂದು ಅಲ್ಲಿನ ಸಿಬಂದಿಗಳಲ್ಲಿ ವಿಚಾರಿಸಿ ನಮ್ಮ ಕಂಪಾರ್ಟ್‌ಮೆಂಟ್‌ಗೆ ಹೋಗಿ ಕುಳಿತು ನಿಟ್ಟುಸಿರು ಬಿಟ್ಟೆವು. ರೈಲಿನಲ್ಲಿ ಕುಳಿತು ಕ್ಯಾಮರಾದೊಳಗಿದ್ದ ಖಜುರಾಹೋ ಚಿತ್ರಗಳನ್ನು ನೋಡಿದಾಗ ಎಲ್ಲವೂ ಮರೆತಿತ್ತು. ಭಾನುವಾರದ ತಡರಾತ್ರಿ ಮನೆಗೆ ತಲುಪಿದಂತೆ ಮರುದಿನ ಕೆಲಸದ ದಿನವೆಂದು ನೆನೆದು ಮುಸುಕೆಳೆದು ಮಲಗಿದೆವು. ಮತ್ತೊಂದು ವಾರದ ಆರಂಭಕ್ಕೆ.

ಖಜುರಾಹೋ ಪ್ರವಾಸ ಕಥನ – ಖಜ್ಜುಪುರದಲ್ಲಿ ಚಂಡೇಲಾ ರಾಜವಂಶ ಸ್ಥಾಪನೆ

ಹಿಂದಿಯ ಮೊದಲ ಕವಿ ಎಂದು ಗುರುತಿಸಿಕೊಂಡ ಚಂದ ಬರ್ದಾಯಿಯ ಕೃತಿ ಪೃಥ್ವಿರಾಜ್ ರಾಸೊ ಸುಮಾರು ಹತ್ತು ಸಾವಿರ ಛಂದಗಳ ಲಾವಣಿ ಕಾವ್ಯ. ಹನ್ನೆರಡನೇ ಶತಮಾನದಲ್ಲಿ ಚಂದ ಬರ್ದಾಯಿಯು ಪೃಥ್ವಿರಾಜ್ ಚೌಹಾಣನ ಆಸ್ಥಾನ ಕವಿಯಾಗಿದ್ದನು. ಪೃಥ್ವಿರಾಜ್ ರಾಸೋದ ಒಂದು ಭಾಗ ಮಹೋಬ ಖಾಂಡ. ಇದರಲ್ಲಿ ಮಧ್ಯಭಾರತವನ್ನು ಹತ್ತನೇ ಶತಮಾನದಿಂದ ಹನ್ನೆರಡನೇ ಶತಮಾನದ ವರೆಗೆ ಆಳಿದ ಚಂಡೇಲಾ ವಂಶದ ಸ್ಥಾಪಕ ರಾಜನ ಕಥೆಯನ್ನು ಒಂದು ಜಾನಪದ ಕಾವ್ಯವಾಗಿ ಹೇಳಲಾಗಿದೆ. ಒಂದು ದಂತಕತೆ ಎಂದೆನಿಸುವ ಚಂಡೇಲಾ ರಾಜವಂಶದ ಸ್ಥಾಪಕ ಚಂದ್ರವರ್ಮನ್‌ನ ಹುಟ್ಟಿನ ಕುರಿತಾದ ಕತೆಯು ತುಂಬಾ ರೋಚಕವಾಗಿದೆ.

ಉತ್ತರಭಾರತವನ್ನು ಆಳುತ್ತಿದ್ದ ಗಹಿರಾವಾರ ವಂಶದ ರಾಜ ಇಂದ್ರಜಿತ್ ಗಹಿರಾವಾರನ ರಾಜಮನೆತನದ ಬ್ರಾಹ್ಮಣ ಪುರೋಹಿತ ಹೇಮರಾಜ. ಕಾಶೀ ಪಟ್ಟಣದಲ್ಲಿದ್ದ ಹೇಮರಾಜ ಅತ್ಯಂತ ಸ್ನೇಹಶೀಲನಾಗಿದ್ದ. ತನಗೆ ಮಗಳೊಬ್ಬಳು ಹುಟ್ಟಿದಾಗ ಅವಳಿಗೆ ಹೇಮಾವತಿ ಎಂದು ಹೆಸರಿಟ್ಟ. ಅವಳು ರೂಪದಲ್ಲಿ ಅತ್ಯಂತ ಸುರಸುಂದರಿಯಾಗಿದ್ದಳು. ಅಂತೆಯೇ ಗುಣದಲ್ಲಿಯೂ ಆಕೆ ಶೀಲ ಶೋಭಿತೆಯಾಗಿದ್ದಳು. ದುರ್ದೈವದಿಂದ ಅವಳಿಗೆ ಇಂದ್ರನ ಶಾಪವೆರಗಿತು. ಹದಿನಾರನೇ ವಯಸ್ಸಿಗೆ ಅವಳು ವಿಧವೆಯಾದಳು.

ಅದೊಂದು ಗ್ರೀಷ್ಮ ಕಾಲದ ದಿನ. ಸೆಖೆಯಿಂದ ಬಸವಳಿದ ಹೇಮಾವತಿಯು ತಣ್ಣನೆಯ ನೀರಿನಲ್ಲಿ ಮೀಯಲೆಂದು ಹೊರಗೆ ಹೋದಳು. ಕುಮುದ ಪುಷ್ಪಗಳ ಸಖ ಚಂದ್ರದೇವ ಆಗಸದಲ್ಲಿ ಬೆಳಗುತ್ತಿದ್ದ. ಕೆಳಗೆ ಅತಿಲೋಕ ಸುಂದರಿಯಾದ ಹೇಮಾವತಿಯು ಸ್ವಚ್ಛಂದ ನೀರಿನಲ್ಲಿ ತನ್ನ ತನುವಿನ ಬೇಗೆಯನ್ನು ತಣಿಸುತ್ತಾ ಮೀಯುತ್ತಿದ್ದಳು. ನೀರಿನಿಂದ ತೋಯುತ್ತಿದ್ದ ಹದಿಹರೆಯದ ಅತಿ ಸುಂದರಿ ಹೆಣ್ಣೊಬ್ಬಳನ್ನು ಕಂಡ ಚಂದ್ರದೇವನ ಚಿತ್ತ ಚಂಚಲಗೊಂಡಿತು. ಭೂಮಿ ಮೇಲಿನ ಈ ನೋಟವನ್ನು ಕಂಡು ಆತ ಉಲ್ಲಸಿತನಾದ. ಚಂದ್ರದೇವ ಧರೆಗಿಳಿದು ಬಂದ. ಸುರ ಸುಂದರಿ ಹೇಮಾವತಿಯನ್ನು ಅಪ್ಪಿಕೊಂಡ. ಚಂದ್ರದೇವನು ಆ ರಾತ್ರಿಯಿಡೀ ಹೇಮಾವತಿಯೊಂದಿಗೆ ಕಳೆದ. ತನ್ನನ್ನು ಸಂಪೂರ್ಣ ಅರ್ಪಿಸಿಕೊಂಡ ಹೇಮಾವತಿಗೆ ಆತ ಯಾರೆಂದು ಗೊತ್ತಿರಲಿಲ್ಲ. ತನ್ನ ಕೆಲಸ ಮುಗಿಸುತ್ತಲೇ ಚಂದ್ರದೇವನು ಸ್ವಸ್ಥಾನ ಸೇರಲು ಹೊರಡಲನುವಾದ. ಹೊರಗಿನ ಸೆಖೆಯ ಬೇಗೆಯನ್ನು ಕಳೆಯಲೆಂದು ಮೀಯಲು ಬಂದ ಹೇಮಾವತಿಯ ಒಳಗಿನ ದಾಹವು ತಣಿದಿತ್ತು. ಜತೆಗೆ ಕ್ಷಣವೊಂದರಲ್ಲಿ ನಡೆದ ಲೋಪದ ಅರಿವೂ ಉಂಟಾಯಿತು. ಚಂದ್ರದೇವನ ಹಿಂದೆ ಓಡುತ್ತಾ ಹೇಮಾವತಿಯು ಅವನ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡಳು. ನನ್ನನ್ನು ಭೋಗಿಸಿ ಕಳಂಕಗೊಳಿಸಿದ ಏ ಪುರುಷನೇ ನಿನಗೆ ನನ್ನ ಶಾಪವಿದೆ ಎಂದು ಬೆದರಿಸಿದಳು.

ಹೊರಡುತ್ತಿದ್ದ ಚಂದ್ರದೇವ ಹಿಂದೆ ತಿರುಗಿ ಎಲೇ ಮದನಾಂಗಿ, ನಮ್ಮ ಪಾಪಕ್ಕೆ ನೀನು ನನಗೆ ಶಾಪ ನೀಡಬೇಡ. ನಿನ್ನೊಡಲಲ್ಲಿ ಒಬ್ಬ ರಾಜನಾಗುವ ಪುತ್ರನನ್ನು ಪಡೆಯುವ ಸಂಭ್ರಮವನ್ನು ಅನುಭವಿಸು. ಆಚರಿಸು. ನಿನ್ನೊಡಲಲ್ಲಿ ಹುಟ್ಟುವ ಮಗು ರಾಜನಾಗುವನಲ್ಲದೇ ಅನೇಕ ದೇಶಗಳನ್ನು ಜಯಿಸಿ ಸಾವಿರ ದಿಕ್ಕುಗಳಲ್ಲಿ ತನ್ನ ಹೆಸರನ್ನು ಮೆರೆಸುತ್ತಾನೆ ಎಂದ. ಬುದ್ಧಿವಂತೆಯಾಗಿದ್ದ ಹೇಮಾವತಿ ಚಂದ್ರದೇವನಿಗೆ ಶಾಪ ಕೊಡುವ ವಿಚಾರವನ್ನು ಬಿಟ್ಟು ಬಿಟ್ಟಳು. ಆದರೆ ಸಮಾಜದಲ್ಲಿ ತಾನೊಬ್ಬ ಕಳಂಕಿತೆ ಎಂದು ದೂಷಣೆಗೆ ಒಳಗಾಗುವ ಭೀತಿಯಿಂದ ಕರುಬಿದಳು. ಏ ಚಂದ್ರದೇವ, ನೀನು ಏನೇ ಹೇಳಿದರೂ ನನ್ನ ಕಳಂಕವನ್ನು ಹೇಗೆ ತೊಳೆಯಲಿ? ನನ್ನ ಶರೀರದಲ್ಲಿ ಯೌವನ ತುಂಬಿ ತುಳುಕುತ್ತಿರುವುದು ನಿಜವಿರಬಹುದು. ಅದು ಸೌಂದರ್ಯದಿಂದ ಬಳುಕುತ್ತಿರುವುದು ನಿಜವಿರಬಹುದು. ಆದರೆ ಈ ದೇಹಕ್ಕೆ ದೊರೆಯಿಲ್ಲದ, ಗಂಡ ಸತ್ತ ವಿಧವೆ ನಾನು ಎಂದು ಚಂದ್ರದೇವನಲ್ಲಿ ಮೊರೆಯಿಟ್ಟಳು.

ಹದಿಹರೆಯದ ಮೋಹಕ ವಿಧವೆ ಹೇಮಾವತಿಯಲ್ಲಿ ಗರ್ಭಾಂಕುರಗೊಳಿಸಿದ ಚಂದ್ರದೇವ ಧೈರ್ಯದ ಮಾತುಗಳನ್ನಾಡಿದ. ಚೆಲುವೆಯೇ ಬೆದರಬೇಡ ನೀನು. ಕರ್ಣಾವತಿ ನದಿತೀರದಲ್ಲಿ ನಿನಗೊಬ್ಬ ವೀರ ಸುಕುಮಾರನು ಜನಿಸುವನು. ನಂತರ ನೀನು ಖಜ್ಜುಪುರಕ್ಕೆ ಹೋಗು. ಅಲ್ಲಿ ಅವನೊಂದಿಗೆ ದಾನಧರ್ಮ, ಯಜ್ಞಯಾಗಾದಿಗಳನ್ನು ನಡೆಸು. ಆ ವೀರಪುತ್ರನು ತನ್ನ ಚದುರಂಗ ಬಲದಿಂದ ಎಲ್ಲಾ ರಾಜರುಗಳನ್ನು ಸೋಲಿಸಿ ಮಹೋಬಾದ ರಾಜ್ಯಭಾರವನ್ನು ಮಾಡುವನು. ಕಬ್ಬಿಣವನ್ನು ಚಿನ್ನಗೊಳಿಸುವ ಪರಶುಮಣಿಯು ಅವನಿಗೆ ದೊರೆಯುವುದು. ಅವನು ಅನೇಕ ದೇವಾಲಯಗಳನ್ನು ಕಟ್ಟುವನು. ಸರೋವರ, ಕೆರೆಗಳನ್ನು ನಿರ್ಮಿಸುವನು. ಪವಿತ್ರವಾದ ಕಾಲಂಜರಿನಲ್ಲಿ ಒಂದು ಕೋಟೆಯನ್ನು ಕಟ್ಟಿಸುವನು ಎಂದು ಚಂದ್ರದೇವನು ಭವಿಷ್ಯವಾಣಿಯನ್ನು ನುಡಿದನು.

ಹೇಮಾವತಿಗೆ ಚಂದ್ರದೇವನ ಈ ಮಾತುಗಳಿಂದ ಸಮಾಧಾನವಾಗುವುದಿಲ್ಲ. ತಾನು ಅಂಟಿಸಿಕೊಂಡ ಈ ಕಳಂಕದಿಂದ ನಾನು ನನ್ನ ಸಮಾಜದಿಂದ ದೂಷಣೆಗೆ ಒಳಗಾಗುವುದು ಮಾತ್ರವಲ್ಲ, ಈ ಪಾಪ ನನ್ನನ್ನು ಮುಂದಿನ ಜನ್ಮದಲ್ಲೂ ಕಾಡಬಹುದು. ನನಗೆ ಹುಟ್ಟಲಿರುವ ಮಗುವನ್ನೇನೋ ನೀನು ಭುವನಪುತ್ರನನ್ನಾಗಿಸುವೆ. ಆದರೆ ನಾನು ಅವಮಾನದ ನರಕಯಾತನೆಯಲ್ಲಿ

ನರಳಬೇಕಲ್ಲವೇ ಎಂದು ಚಂದ್ರದೇವನಲ್ಲಿ ಗೋಳಾಡುತ್ತಾಳೆ.

ಆಗ ಚಂದ್ರದೇವನು ಅವಳಿಗೆ ಕೆಲವು ಪ್ರಾಯಶ್ಚಿತ ಕರ್ಮಕಾರ್ಯಗಳನ್ನು ತಿಳಿಸಿದ. ನಿನ್ನ ಉದರದಲ್ಲಿ ಜನಿಸುವ ಆ ವೀರಪುತ್ರನು ತನ್ನ ಷೋಡಸ ಪ್ರಾಯದಲ್ಲಿ ಭಾಂಡ್ಯಯಜ್ಞವನ್ನು ಮಾಡುತ್ತಾನೆ. ಆಗ ನಿನ್ನ ಎಲ್ಲಾ ಪಾತಕಗಳೂ ಹರಿದು ಹೋಗುತ್ತವೆ ಎಂದ. ಎಲೇ ಸುಮನೋಹರಿ ಸುಂದರಿ ಹೇಮಾವತಿ, ನೀನಿನ್ನು ಯಾವುದಕ್ಕೂ ಅಳುಕಬೇಕಾಗಿಲ್ಲ. ನಿನ್ನ ಪುತ್ರ ಉನ್ನತ ಗುಣಗಳ ಕ್ಷತ್ರಿಯ ರಾಜನಾಗಿ ಮೆರೆಯುತ್ತಾನೆ ಎಂದು ಹೇಳಿ ಚಂದ್ರದೇವನು ಅಲ್ಲಿಂದ ಮರೆಯಾಗುತ್ತಾನೆ.

ವಿಧವೆಯೊಬ್ಬಳು ಗರ್ಭವತಿಯಾಗಿ ಸಮಾಜದಲ್ಲಿ ಬದುಕುವುದು ಅಸಹಜ ಎಂದು ಅರಿತು ಹೇಮಾವತಿಯು ಕಾಲಿಂಜರಿಗೆ ಬರುತ್ತಾಳೆ. ತೀರ್ಥಸ್ನಾನ ಮಾಡುತ್ತಾ ನಾಲ್ಕು ತಿಂಗಳುಗಳನ್ನು ಅಲ್ಲಿಯೇ ಕಳೆಯುತ್ತಾಳೆ. ಕಾಲಿಂಜಾರಿನಿಂದ ಆಕೆ ಒಂದು ಗ್ರಾಮಕ್ಕೆ ಬರುತ್ತಾಳೆ. ಅಲ್ಲಿಯ ಗ್ರಾಮ ಮುಖ್ಯಸ್ಥನ ಮನೆಯಲ್ಲಿದ್ದು ತನ್ನ ಮಗುವಿಗೆ ಜನ್ಮ ನೀಡುತ್ತಾಳೆ.

ವೈಶಾಖಮಾಸದ ಏಕಾದಶಿಯ ಸೋಮವಾರದಂದು ಜನಿಸಿದ ಆ ಸುಂದರ ಮಗು ಇನ್ನೊಂದು ಚಂದ್ರನಂತೆ ಶೋಭಿಸುತ್ತಿತ್ತು. ಮಗುವಿಗೆ ಚಂದ್ರವರ್ಮನ್ ಎಂದು ಹೆಸರಿಡಲಾಯಿತು. ದೇವಲೋಕದಲ್ಲಿ ಸುರತಿಯರು ಮಂಗಳಗಾನ ಹಾಡಿದರು. ಚಂದ್ರದೇವನೂ ತನ್ನ ಪುತ್ರನನ್ನು ನೋಡಲು ಬಂದ. ಹೇಮಾವತಿಗೆ ಹುಟ್ಟಿದ ಮಗನ ಭವಿಷ್ಯವಾಣಿಯನ್ನು ಮತ್ತೊಮ್ಮೆ ಪಠಿಸಿದ. ತನ್ನ ಪುತ್ರನು ಸ್ಥಾಪಿಸುವ ರಾಜವಂಶವು ವರ್ಮನ್ ಎಂಬ ಉಪನಾಮವನ್ನು ಎಲ್ಲಿಯವರೆಗೆ ಉಳಿಸಿಕೊಳ್ಳುತ್ತಾರೊ ಅಲ್ಲಿಯವರೆಗೆ ಅವನ ರಾಜವಂಶವೇ ರಾಜ್ಯಭಾರಮಾಡುವುದು ಎಂದು ಚಂದ್ರದೇವನು ಮತ್ತೊಂದು ವರವನ್ನು ನೀಡಿದ. ಚಂದ್ರದೇವನು ಮಹೋತ್ಸವವನ್ನೇ ಆಚರಿಸಿದ. ಸುರಗುರು ಬೃಹಸ್ಪತಿಯೇ ಮಗುವಿನ ಜನ್ಮ ಕುಂಡಲಿಯನ್ನು ಬರೆದ.

ಚಂದ್ರವರ್ಮನ್ ಹದಿನಾರರ ಹರೆಯಕ್ಕೆ ಬರುವ ಮೊದಲೇ ಅನೇಕ ಶಕ್ತಿಶಾಲಿ ಹಾಗು ಧೈರ್ಯದ ಕಾರ್ಯಗಳನ್ನು ಮಾಡಿ ತೋರಿಸಿದ. ಹುಲಿಯನ್ನು ಸಣ್ಣ ಕಲ್ಲಿನ ತುಂಡಿನಿಂದಲೇ ಕೊಂದ. ಬಲಿಷ್ಟ ಸಿಂಹವನ್ನು ಸಣ್ಣ ಚೂರಿಯಿಂದ ಮಣಿಸಿದ. ತನ್ನ ಮಗನ ಅದ್ಭುತ ಸಾಧನೆಗಳನ್ನು ನೋಡಿ ಹೇಮಾವತಿ ಆನಂದ ತುಂದಿಲಿತಳಾಗಿ ಚಂದ್ರನ ಕುರಿತಾದ ಮಂತ್ರ ಪಠಣಗಳನ್ನು ಮಾಡಲು ಆರಂಭಿಸಿದಳು. ಹದಿನಾರರ ಪ್ರಾಯ ತುಂಬುತ್ತಲೇ ಚಂದ್ರದೇವನು ಚಂದ್ರವರ್ಮನ್‌ಗಾಗಿ ಪರಶುಮಣಿಯನ್ನು ತಂದುಕೊಟ್ಟ. ಚಂದ್ರವರ್ಮನ್‌ನನ್ನು ಈ ಮಾನವಲೋಕದ ರಾಜಾಧಿರಾಜ ನೀನು ಎಂದು ಹರಸಿದ. ಚಂದ್ರವರ್ಮನ್‌ನ ಪಟ್ಟಾಭಿಷೇಕಕ್ಕೆ ದೇವಲೋಕದ ದೇವತೆಗಳೆಲ್ಲಾ ಧರೆಗಿಳಿದು ಬಂದರು. ಬೃಹಸ್ಪತಿ, ಕುಬೇರಾದಿಯಾಗಿ ಎಲ್ಲ ದೇವಗಣಗಳು ಖಜ್ಜುಪುರಕ್ಕೆ ಬಂದರು.

ಐದು ಪ್ರಹಾರಗಳನ್ನೊಳಗೊಂಡ ಎರಡು ಜನಪದಗಳ ರಾಜನಾಗಿದ್ದ ಚಂದ್ರವರ್ಮನ್ ಮೂರು ಸಾವಿರ ಸೈನಿಕರೊಂದಿಗೆ ರಾಜ್ಯ ವಿಸ್ತರಣೆಗಾಗಿ ದಂಡಿಗೆ ಹೊರಟನು. ಈ ಚಂಡೇಲಾ ರಾಜನ ಸಾಧನೆಗಳನ್ನು ಕೇಳಿದ ಕಾಶಿಯ ಗಹಿರಾವಾರನು ತನ್ನ ರಾಜ್ಯವನ್ನು ಚಂದ್ರವರ್ಮನ್‌ಗೆ ಬಿಟ್ಟು ಕೊಟ್ಟು ಓಡಿ ಹೋದನು.

ಚಂದ್ರವರ್ಮನ್ ಕಾಲಿಂಜಾರಿನಿಂದ ಪತ್ನಿ ಸಮೇತ ಖಜ್ಜುಪುರಕ್ಕೆ ಬಂದು ತನ್ನ ತಾಯಿ ಹೇಮಾವತಿಯ ಕಾಲ ಬಳಿ ಕುಳಿತ. ತಾಯಿಯು ತಾನು ಪಟ್ಟ ಬವಣೆಯನ್ನು ಮತ್ತು ಕಳಂಕಿತಗೊಂಡ ವಿಚಾರವನ್ನು ಮಗನಿಗೆ ವಿವರಿಸಿದಳು. ಚಂದ್ರದೇವನು ತಿಳಿಸಿದಂತೆ ಭಾಂಡ್ಯಯಜ್ಞವನ್ನು ನಡೆಸಲು ಕೇಳಿಕೊಂಡಳು. ಖಜ್ಜುಪುರದಲ್ಲಿ ಸುಂದರವಾದ ಕೆರೆ ಹಾಗೂ ತೋಟಗಳನ್ನು ನಿರ್ಮಿಸಿ ಅಲ್ಲಿ ಎಂಬತ್ತೈದು ದೇವಾಲಯಗಳನ್ನು ಕಟ್ಟಲು ಹೇಮಾವತಿಯು ತನ್ನ ಪುತ್ರ ಚಂದ್ರವರ್ಮನ್‌ನನ್ನು ಕೇಳಿಕೊಂಡಳು.

ವೀರಪುತ್ರ ಚಂದ್ರವರ್ಮನ್ ತನ್ನ ತಾಯಿಯ ಅಭಿಲಾಶೆಗಳನ್ನೆಲ್ಲಾ ಪೂರೈಸಲು ಯಜ್ಞವನ್ನು ಮಾಡಿದನು. ದೇವಾಲಯಗಳನ್ನು ನಿರ್ಮಿಸಲು ದೇವಲೋಕದಿಂದ ವಿಶ್ವಕರ್ಮನನ್ನೇ ಒಲಿಸಿ ತರಿಸಿದ. ವಿಶ್ವಕರ್ಮನು ನಾಲ್ಕೇ ಗಂಟೆಗಳಲ್ಲಿ ಎಂಬತ್ತೈದು ದೇವಾಲಯಗಳನ್ನು ನಿರ್ಮಿಸಿದ. ಯಜ್ಞಯಾಗಾದಿಗಳ ನಂತರ ಹೇಮಾವತಿಯ ಎಲ್ಲಾ ಪಾತಕಗಳು ಕಳೆದವು. ಪಾಪಮುಕ್ತೆಯಾದ ಹೇಮಾವತಿ ನೇರವಾಗಿ ಸ್ವರ್ಗಲೋಕವನ್ನು ಸೇರುವಳು. ಮಂಗಳ ಕಾರ್ಯಗಳೆಲ್ಲಾ ಮುಗಿದ ನಂತರ ಚಂದ್ರವರ್ಮನ್ ಮಹೋಬದಲ್ಲಿ ಹೊಸ ರಾಜಧಾನಿಯನ್ನು ನಿರ್ಮಿಸಲು ತೊಡಗುತ್ತಾನೆ.

**ಖಜುರಾಹೊ ಪ್ರವಾಸ ಮಾಹಿತಿ**

ಮಧ್ಯಪ್ರದೇಶದ ಛತ್ತರಪುರ ಜಿಲ್ಲೆಯಲ್ಲಿರುವ ಖಜುರಾಹೋ ಪ್ರವಾಸಿ ಕೇಂದ್ರವಾದರೂ ಅದೊಂದು ಹೆಚ್ಚು ಜನನಿವಾಸದ ಪಟ್ಟಣವಲ್ಲ. ವಿಮಾನ ನಿಲ್ದಾಣ, ಪಂಚತಾರ ಹೋಟೆಲುಗಳು ಮೇಲ್ವರ್ಗದ ಪ್ರವಾಸಿಗಳಿಗೆ ಸೌಲಭ್ಯಯುತವಾಗಿವೆ. ಆದರೆ ಮಧ್ಯಮವರ್ಗದ ಪ್ರವಾಸಿಗಳು ಸ್ವಲ್ಪ ಶ್ರಮವಹಿಸಿ ತಮ್ಮ ರೈಲು ಅಥವಾ ರಸ್ತೆ ಪ್ರಯಾಣವನ್ನು ಮೊದಲೇ ಆಯೋಜಿಸಿದರೆ ನಿರಾತಂಕವಾಗಿ ಖಜುರಾಹೋವನ್ನು ನೋಡಿ ಬರಬಹುದು.

ಕೆಲವು ಪ್ರವಾಸಿಗರು ಇದನ್ನು ವಾರಾಣಾಸಿ ಅಥವಾ ಆಗ್ರಾ ಪ್ರವಾಸದೊಂದಿಗೆ ಜೋಡಿಸಿದರೂ ಇಲ್ಲಿಗೆ ಸಂಪರ್ಕ ಒಂದು ಆತಂಕದ ವಿಚಾರವೇ ಆಗಿದೆ. ರೈಲಿನಲ್ಲಿ ಪ್ರಯಾಣಿಸುವವರು ಉತ್ತರ ಪ್ರದೇಶದ ಝಾನ್ಸಿಯಲ್ಲಿ ಇಳಿದು ರಸ್ತೆ ಮೂಲಕ ಖಜುರಾಹೋ ತಲುಪಬಹುದು. ಆದರೆ ಆಗ್ರಾ, ಝಾನ್ಸಿ, ಗ್ವಾಲಿಯರ್ ಮೂಲಕ ಅಲ್ಲಿಗೆ ನಿತ್ಯ ಬರುವ ಬೆರಳೆಣಿಕೆಯ ಬಸ್ಸುಗಳನ್ನು ನಂಬಿದರೆ ಯಾವ ಸಮಯಕ್ಕೆ ಎಲ್ಲಿರುತ್ತೀರಿ ಎನ್ನುವುದು ಅಸಾಧ್ಯ. ಝಾನ್ಸಿಯಲ್ಲಿ ಇಳಿದು ಬಾಡಿಗೆ ಕಾರುಗಳನ್ನು ಮಾಡಿಯೂ ಹೋಗಬಹುದು. ವಾರಾಣಾಸಿಯ ಕಡೆಯಿಂದ ರೈಲಿನಲ್ಲಿ ಬರುವುದಾದರೆ ಸತ್ನಾದಲ್ಲಿ ಇಳಿಯಬೇಕು. ಸತ್ನಾ ರೈಲ್ವೇ ನಿಲ್ದಾಣವು ಮುಂಬಯಿ-ಅಲಹಾಬಾದ್ ರೈಲ್ವೆ ಮಾರ್ಗದಲ್ಲಿದೆ. ಸತ್ನಾದಿಂದ ಮತ್ತೆ ರಸ್ತೆಯನ್ನು ಅವಲಂಬಿಸಬೇಕಾಗುತ್ತದೆ.

ಇತ್ತೀಚೆಗೆ ಖಜುರಾಹೋದಲ್ಲಿ ರೈಲು ನಿಲ್ದಾಣವು ಆರಂಭಗೊಂಡಿದೆ. ದೆಹಲಿಯಿಂದ ಖಜುರಾಹೋಗೆ ನೇರ ರೈಲು ಸಂಪರ್ಕ ಆರಂಭವಾಗಿದೆ. ಉತ್ತರ ಪ್ರದೇಶದ ಮಾನಿಕ್‌ಪುರ್‌ಗೆ ಹೋಗುವ ಯು.ಪಿ. ಸಂಪರ್ಕ್‌ಕ್ರಾಂತಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಕೆಲವು ಬೋಗಿಗಳು ಖಜುರಾಹೋಗೆ ಹೋಗುವಂತೆ ವ್ಯವಸ್ಥೆ ಮಾಡಲಾಗಿದೆ. ಮಾನಿಕ್‌ಪುರ್ ಕಡೆ ಹೋಗುವ ರೈಲಿನಲ್ಲಿ ಬಂದರೆ ಮಾಹೋಬಾದಲ್ಲಿಳಿದು ಪ್ರಯಾಣ ಮುಂದುವರಿಸಬಹುದು. ಯು.ಪಿ. ಸಂಪರ್ಕ್‌ಕ್ರಾಂತಿ ಎಕ್ಸ್‌ಪ್ರೆಸ್ ದೆಹಲಿಯ ನಿಜಾಮುದ್ದೀನ್ ರೈಲ್ವೇ ನಿಲ್ದಾಣದಿಂದ ಸಂಜೆ ಎಂಟರ ಹೊತ್ತಿಗೆ ಹೊರಟು ಮುಂಜಾನೆ ಏಳರಷ್ಟಕ್ಕೆ ಖಜುರಾಹೋದಲ್ಲಿರುತ್ತದೆ. ಅದು ವಾರಕ್ಕೆ ಮೂರು ದಿನ ಮಾತ್ರ ಓಡಾಡುತ್ತದೆ. ಮುಂಜಾನೆ ತಲುಪಿದ ರೈಲು ಮತ್ತೆ ದೆಹಲಿಗೆ ಹೊರಡುವುದು ಸಂಜೆ ಆರರ ಹೊತ್ತಿಗೆ. ಬೆಳಗ್ಗೆ ಖಜುರಾಹೋ ತಲುಪಿದ ಪ್ರವಾಸಿಗರು ದೇವಾಲಯಗಳನ್ನು ವೀಕ್ಷಿಸಿ ಆರಾಮವಾಗಿ ಸಂಜೆಯ ರೈಲಿಗೆ ವಾಪಾಸಾಗಬಹುದು. ಆದರೆ ಅವರು ಸಂಜೆ ಏಳರ ನಂತರ ದೇವಾಲಯ ಸಂಕೀರ್ಣದಲ್ಲಿ ನಡೆಯುವ ದೃಶ್ಯ ಬೆಳಕಿನ ಕಾರ್ಯಕ್ರಮವನ್ನು ನೋಡಲಾಗುವುದಿಲ್ಲ.

ಖಜುರಾಹೋದಲ್ಲಿ ಊಟ ಮತ್ತು ವಸತಿಗಾಗಿ ಪಂಚತಾರ ಹೋಟೆಲು ಮತ್ತು ರೆಸಾರ್ಟ್‌ಗಳಲ್ಲದೇ ಮಧ್ಯಮವರ್ಗದವರಿಗಾಗಿ ಸಣ್ಣ ಹೋಟೇಲುಗಳೂ ಇವೆ. ಅಲ್ಲಿರುವ ಅಂತಹ ಹೋಟೆಲುಗಳ ಕುರಿತು ಮೊದಲೇ ವಿಚಾರಣೆ ಮಾಡಿ ಹೊರಟರೆ ಉತ್ತಮ ಹೋಟೆಲ್ ಉತ್ತಮ ದರದಲ್ಲಿ ಸಿಗಬಹುದು. ಅಥವಾ ಅಲ್ಲಿಗೆ ನೇರವಾಗಿ ಹೋದ ಮೇಲೆ ಕೆಲವು ಹೋಟೆಲುಗಳನ್ನು ನೋಡಿ ವಿಚಾರಿಸಿ ಸರಿಹೊಂದಿದರೆ ತೆಗೆದುಕೊಳ್ಳಬಹುದು.

ಊಟೋಪಚಾರಕ್ಕೆ ಹಲವು ಉತ್ತರ ಭಾರತೀಯ, ಬಂಗಾಳಿ ಹಾಗೂ ಕಾಂಟಿನೆಂಟಲ್ ಹೋಟೆಲ್‌ಗಳು ಇವೆ. ಮದ್ರಾಸು ಕಾಫಿ ಹೌಸ್‌ನಲ್ಲಿ ದಕ್ಷಿಣ ಭಾರತೀಯ ತಿಂಡಿ ಊಟ ದೊರೆಯುತ್ತದೆ. ಅಂತೆಯೇ ಅಲ್ಲಿನ ಜನಪ್ರಿಯ ರಾಜಾ ಕೆಫೆಯನ್ನು ಹಲವು ವರ್ಷಗಳಿಂದ ಸ್ವಿಟ್ಜರ್‌ಲ್ಯಾಂಡ್‌ನ ಹೆಂಗಸೊಬ್ಬರು ನಡೆಸುತ್ತಿದ್ದಾರೆ. ಬಹುತೇಕ ವಿದೇಶಿ ಪ್ರವಾಸಿಗರೇ ಅಲ್ಲಿ ತುಂಬಿರುತ್ತಾರೆ. ಅಲ್ಲಿನ ತಿಂಡಿಗಳ ಗುಣಮಟ್ಟ ಕೆಟ್ಟದಾಗಿಲ್ಲವಾದರೂ ಕೆಲಸಗಾರರ ಸೇವೆಯನ್ನು ಅನುಭವಿಸಿದರೆ ಮತ್ತೊಮ್ಮೆ ಅಲ್ಲಿ ಹೋಗಲು ಎರಡು ಸಲ ಯೋಚನೆ ಮಾಡುವಿರಿ.

ರಸ್ತೆ ಬದಿಯಲ್ಲಿ, ಪಶ್ಚಿಮ ದೇವಾಲಯಗಳ ಗುಂಪಿನ ಬಳಿಯಿರುವ ಸಣ್ಣ ಪೇಟೆಯಲ್ಲಿ ಅಥವಾ ಪೂರ್ವ ದೇವಾಲಯಗಳ ಗುಂಪಿನ ಜೈನ ಮಂದಿರದ ಪಕ್ಕದಲ್ಲಿ ಸ್ಮರಣಿಕೆಗಳನ್ನು ಖರೀದಿಸಬಹುದು.

**ಬಾಲಕೃಷ್ಣ ನಾಯ್ಕ್ ಡಿ.**

# ಡಿಸೆಂಬರ್ ತಿಂಗಳ 5ನೇ ತಾರೀಕಿನಂದು ನಿಧನರಾದ ಶ್ರೀ ರಾಜಶೇಖರ ಮೂರ್ತಿ ಅವರಿಗೆ ದೆಹಲಿ ಕರ್ನಾಟಕ ಸಂಘದ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ



## ಶ್ರೀ ರಾಜಶೇಖರ ಮೂರ್ತಿ ಅವರಿಗೆ ಬಸವ ಇಂಟರ್ ನ್ಯಾಷನಲ್ ಸೆಂಟರ್ ವತಿಯಿಂದ ಶ್ರದ್ಧಾಂಜಲಿ

ದಿನಾಂಕ 05.12.2010ರಂದು ನಿಧನರಾದ ಶ್ರೀ ರಾಜಶೇಖರ ಮೂರ್ತಿಯವರಿಗೆ ಬಸವ ಇಂಟರ್‌ನ್ಯಾಶನಲ್ ಸೆಂಟರ್‌ನ ವತಿಯಿಂದ ದಿನಾಂಕ 11.12.2010ರಂದು ದೆಹಲಿ ಕನ್ನಡ ಶಾಲೆಯಲ್ಲಿ ಸಂತಾಪಸೂಚಕ ಸಭೆಯನ್ನು ಏರ್ಪಡಿಸಿದ್ದರು.

ನೆರೆದ ಎಲ್ಲ ಸದಸ್ಯರು ಮೃತರ ಭಾವಚಿತ್ರಕ್ಕೆ ಪುಷ್ಪಾಂಜಲಿ ಅರ್ಪಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತ ಎರಡು ನಿಮಿಷಗಳ ಮೌನವನ್ನು ಆಚರಿಸಿದರು.

ಸೆಂಟರ್‌ನ ಅಧ್ಯಕ್ಷರಾದ ಶ್ರೀ ಅಮರನಾಥ ತಳವಾಡೆಯವರು ಮಾತನಾಡುತ್ತಾ ಶ್ರೀ ರಾಜಶೇಖರ ಮೂರ್ತಿಯವರು ಕನ್ನಡಿಗರಿಗಾಗಿ ಅಪಾರವಾದ ಕೊಡುಗೆಗಳನ್ನು ನೀಡಿದ್ದಾರೆ. ಹುಟ್ಟು, ಸಾವಿನ ಮಧ್ಯದ ಅವಧಿಯ ವೇಳೆಯನ್ನು ಮಾನವೀಯತೆಯಿಂದ ಉತ್ತಮ ವ್ಯಕ್ತಿತ್ವದಿಂದ ಸಾಗಿಸಿದ ವ್ಯಕ್ತಿಯಾಗಿದ್ದರು ಎಂದರು.

ದೆಹಲಿ ಕನ್ನಡ ಶಾಲೆಯ ಅಧ್ಯಕ್ಷರಾದ ಶ್ರೀ ಜಿ.ಎಂ. ಲಿಂಗರಾಜುರವರು ಅವರ ಅತ್ಯುತ್ತಮ ಕಾರ್ಯಗಳಲ್ಲಿ ಮಠಗಳ ಬರಿದಾಗಿದ್ದ ಭಂಡಾರ ಭರಿಸುವಂತೆ ಮಾಡಿದರು ಎಂದರು. ಅಲ್ಲದೆ ತಮ್ಮ ವೈಯಕ್ತಿಕ ಸಮಸ್ಯೆಯೊಂದನ್ನು ಅವರು ನಿವಾರಿಸಿದ್ದನ್ನು ಸ್ಮರಿಸಿಕೊಂಡರು.

ಸೆಂಟರ್‌ನ ಮುಖ್ಯ ಕಾರ್ಯದರ್ಶಿ ಶ್ರೀ ವಿ.ವಿ. ಬಿರಾದಾರ ಅವರು ಶ್ರೀ ರಾಜಶೇಖರ ಮೂರ್ತಿಯವರ ದೆಹಲಿಯ ಆರಂಭದ ದಿನಗಳನ್ನು ಸ್ಮರಿಸುತ್ತಾ ಅವರು ರಾಜಕೀಯ ಧುರೀಣರಾದರೂ ತುಂಬಾ ಪ್ರಾಮಾಣಿಕ ವ್ಯಕ್ತಿಯಾಗಿದ್ದರು ಎಂದರು. ಇದೇ ಸಂದರ್ಭದಲ್ಲಿ ಶ್ರೀನಾಥ್ ಎನ್. ಆರ್., ಟಿ.ಎಂ. ಮೈಲಾರಪ್ಪ, ಉಷಾ ಭರತಾದ್ರಿ ಮೊದಲಾದವರು ಮಾತನಾಡಿ ಮೃತರಿಗೆ ನುಡಿ ನಮನಗಳನ್ನು ಅರ್ಪಿಸಿದರು.

❑ **ಡಾ. ಸುಮಂಗಲಾದೇವಿ**

Delhi Karnataka Sangha's Abhimatha Monthly,
Jan-2011, Price Rs.1/- RNI Regn. No. 53405/91, DL-SW-15/4016/10-11-12
Printout Date : January 8th / 9th, Postal Date :10th / 11th, Total Pages-16



# ಹೊಸ ವರ್ಷದ ಶುಭಾಶಯಗಳು

Editor: Vasantha Shetty Bellare, Printed & Published by R. Renu Kumar, General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at R.V. Printing Press, C-97, Okhla Industrial Area, Phase-I, New Delhi-110020, Tel: 26815778, 40545298,